ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 5 । ಸಂಚಿಕೆ : 5 । ಮೇ - 2023 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಕರ್ನಾಟಕ ವಿಧಾನಸಭಾ ಚುನಾವಣೆ - 2023

## ಮತದಾನ ನಮ್ಮ ನಿಮ್ಮೆಲ್ಲರ ಹಕ್ಕು; ತಪ್ಪದೇ ಮತ ಚಲಾಯಿಸಿ





# ನೇಪಾಳದಲ್ಲಿ ಸಹಕಾರ ಸಮ್ಮೇಳನ – ಸಹಕಾರ ಕ್ಷೇತ್ರದಿಂದ ಸಮಾಜವಾದಿ ಆರ್ಥಿಕತೆ ನಿರ್ಮಾಣ : ಪುಷ್ಪ ಕಮಲ್ ದಹಲ್



**ಕಠ್ಮಂಡು** : ಸಹಕಾರ ಸಂಸ್ಥೆಗಳು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ತರುವಲ್ಲಿ ಯಶಸ್ವಿಯಾಗಿವೆ. ರೈತರು, ಸಣ್ಣ ಉದ್ಯಮಿಗಳು, ಗ್ರಾಹಕರುಗಳು ಇತ್ಯಾದಿ ಜನರಿಗೆ ಅಗತ್ಯವಾದ ಆರ್ಥಿಕ ಸೌಲಭ್ಯಗಳನ್ನು ಈ ಸಂಸ್ಥೆಗಳು ಪೂರೈಸುವ ಮೂಲಕ ಸಮಾಜವಾದಿ ಆರ್ಥಿಕತೆಯ ನಿರ್ಮಾಣದಲ್ಲಿ ಸಹಕಾರಿಯಾಗಿವೆ ಎಂದು ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ ಅವರು ಅಭಿಪ್ರಾಯಪಟ್ಟರು.

ಅವರು ನೇಪಾಳದ ಕಠ್ಮಂಡುವಿನಲ್ಲಿ ಆಯೋಜಿಸಲಾಗಿದ್ದ 3 ದಿನಗಳ ಸಹಕಾರದ ಮೂಲಕ ಸಮೃದ್ಧಿ ಕುರಿತು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು, ಪ್ರಸ್ತುತ ಸಹಕಾರ ಸಂಸ್ಥೆಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳ ಪರಿಹಾರಕ್ಕೆ ಸಹಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇದಕ್ಕೆ ಸರ್ಕಾರವು ಸಹ ಪೂರಕ ನೆರವನ್ನು ನೀಡಬೇಕು ಎಂದರು.

ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ದಿಲೀಪ್ ಸಂಘಾನಿ ಅವರು ಮಾತನಾಡಿ, ಸಹಕಾರ ಕ್ಷೇತ್ರ ಮುಖ್ಯವಾಹಿನಿಗೆ ಬರಬೇಕೆಂಬುದು ನೇಪಾಳದ ಸಹಕಾರಿಗಳ ಉದ್ದೇಶವಾಗಿದೆ. ಇದಕ್ಕೆ ಸಹಕಾರಿಗಳ ಪರವಾಗಿ ಎಲ್ಲರನ್ನು ಅವರು ಅಭಿನಂದಿಸಿದರು. ಮುಂದುವರೆದು ಮಾತನಾಡಿ ಭಾರತದ ಸಹಕಾರ ಸಂಸ್ಥೆಗಳಾದ ಇಫ್ಕೋ ಹಾಗೂ ಕ್ರಿಭ್ಕೋ ಸಂಸ್ಥೆಗಳು ಕೃಷಿ ವಲಯಕ್ಕೆ ನೀಡಿರುವ ಕೊಡುಗೆಯನ್ನು ಕುರಿತು ವಿವರಿಸಿದರು. ಜೊತೆಗೆ ಭಾರತದಲ್ಲಿ ಸಹಕಾರ ಸಂಸ್ಥೆಗಳು ಭವಿಷ್ಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಲಿದ್ದು, ಇದಕ್ಕೆ ಭಾರತದ ಪ್ರಧಾನಮಂತ್ರಿಯವರ 'ಸಹಕಾರ್ ಸೇ ಸಮೃದ್ಧಿ' ಪರಿಕಲ್ಪನೆಯು ಪೂರಕ ವಾತಾವರಣವನ್ನು ನಿರ್ಮಾಣ ಮಾಡುತ್ತಿದೆ ಎಂದರು. ಕ್ರಿಭ್ಕೋ ಅಧ್ಯಕ್ಷರಾದ ಚಂದ್ರಪಾಲ್ ಸಿಂಗ್ ಯಾದವ್ ಅವರು ಮಾತನಾಡಿ, ಸಹಕಾರ ಸಂಸ್ಥೆಗಳು ವಿಶ್ವದಲ್ಲಿ ಶಾಂತಿಯನ್ನು ಕಾಪಾಡಲು ನೆರವಾಗುವುದಲ್ಲದೆ, ಅಬಲ ವರ್ಗದವರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ಕೃಷಿಕರ ಬದುಕಿನಲ್ಲಿ ಸಹಕಾರ ಸಂಸ್ಥೆಗಳು ನಿರ್ವಹಿಸುತ್ತಿರುವ ಪಾತ್ರ ಪ್ರಶಂಸಾರ್ಹವಾದುದು ಎಂದರು. ಸಮ್ಮೇಳನದಲ್ಲಿ ನೇಪಾಳದ ವಿವಿಧ ಸಹಕಾರ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರೆ ರಾಷ್ಟ್ರಗಳ ಸಹಕಾರಿ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಟಿ.ಬಿ. ದೇವೇಗೌಡ
ಅಧ್ಯಕ್ಷರು

ರಾಜ್ಯದಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲದೇ ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ ಸೇರಿದಂತೆ, ಹಲವಾರು ವಲಯಗಳ ಮೂಲಕ ನಾಗರೀಕರಿಗೆ ಮೂಲ ಸೌಕರ್ಯ ಅಭಿವೃದ್ಧಿ ಒದಗಿಸಿಕೊಟ್ಟು ನಾಗರೀಕರು ಶಾಂತಿ ನೆಮ್ಮದಿಯಿಂದ ಜೀವನ ನಿರ್ವಹಿಸಲು ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರದ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದೆ.

# ವಿಧಾನಸಭಾ ಚುನಾವಣೆ : ಮತದಾನ ನಿಮ್ಮ ಹಕ್ಕು-ಮತ ಚಲಾಯಿಸಿ

ಈ ವರ್ಷದ ಮೇ ತಿಂಗಳು ಕರ್ನಾಟಕ ರಾಜ್ಯದ ಜನರಿಗೆ ಬಹಳ ಮಹತ್ವದ ಮಾಸವಾಗಿದೆ. ಕಾರಣ, ಕರ್ನಾಟಕ ವಿಧಾನಸಭೆಗೆ ಮೇ.10ರಂದು ಚುನಾವಣೆ ನಡೆಯಲಿದ್ದು 224 ವಿಧಾನಸಭಾ ಸದಸ್ಯರ ಆಯ್ಕೆ ರಾಜ್ಯದ ಎಲ್ಲಾ ಪ್ರಜ್ಞಾವಂತ ಮತದಾರರಿಂದ ನಡೆಯುವುದಾಗಿದೆ.

ನಮ್ಮದು ಪ್ರಜಾಪ್ರಭುತ್ವ ಮಾದರಿ ಆಡಳಿತ ನೀಡುವ ದೇಶ. ವಿಶ್ವದಲ್ಲಿಯೇ ಹೆಚ್ಚು ಜನಸಂಖ್ಯೆಯುಳ್ಳ, ಉತ್ತಮ ಸಂವಿಧಾನ ಹೊಂದಿರುವ ದೇಶ ಎಂಬ ಹೆಗ್ಗಳಿಕೆ ಇದೆ.

"ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ" ಅಭಿವೃದ್ಧಿಯ ಮೂಲ ಆಶಯಗಳೊಂದಿಗೆ ಉತ್ತಮ ನಾಗರಿಕ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರತಿಯೊಬ್ಬ ಮತದಾರರು ತಮ್ಮ ಹಕ್ಕು ಚಲಾಯಿಸುವುದು ಕರ್ತವ್ಯವೂ ಆಗಿದೆ.

ರಾಜ್ಯದಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲದೇ ಮಾಹಿತಿ ತಂತ್ರಜ್ಞಾನ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ ಸೇರಿದಂತೆ ಹಲವಾರು ವಲಯಗಳ ಮೂಲಕ ನಾಗರಿಕರಿಗೆ ಮೂಲ ಸೌಕರ್ಯ ಅಭಿವೃದ್ಧಿ ಒದಗಿಸಿಕೊಟ್ಟು ನಾಗರಿಕರು ಶಾಂತಿ, ನೆಮ್ಮದಿಯಿಂದ ಜೀವನ ನಿರ್ವಹಿಸಲು ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರದ ಮಾರ್ಗದರ್ಶನ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದೆ.

2023ರ ಮೇ 10 ರಂದು ರಾಜ್ಯ ವಿಧಾನ ಸಭೆಗೆ ನಡೆಯುವ ಚುನಾವಣೆಯಲ್ಲಿ ಒಟ್ಟು 5.21 ಕೋಟಿ ಮತದಾರರಿದ್ದು ಅವರಲ್ಲಿ 2.62 ಕೋಟಿ ಪುರುಷರು, 2.59 ಕೋಟಿ ಮಹಿಳೆಯರು ಹಾಗೂ 4699 ತ್ರಿಲಿಂಗಿಗಳು ಮತದಾನ ಮಾಡಲು ಅರ್ಹರಿದ್ದಾರೆ. ಇವರಲ್ಲಿ 9.17 ಲಕ್ಷ ಯುವ ಮತದಾರರು ಪ್ರಥಮ ಬಾರಿಗೆ ಮತದಾನ ಮಾಡಲು ಉತ್ಸುಕರಾಗಿದ್ದಾರೆ.

ಪ್ರತಿಯೊಬ್ಬ ಮತದಾರರು ಕಡ್ಡಾಯವಾಗಿ ಮತದಾನ ಮಾಡುವುದು ಅವರ ಹಕ್ಕು. ಅವರು ಮತದಾನದ ಹಕ್ಕನ್ನು ಚಲಾಯಿಸಿ ಸ್ಥಿರ ಸರ್ಕಾರ ತರುವುದು ಅವರ ಜವಾಬ್ದಾರಿ. ಇದರಿಂದ ಮುಂದಿನ ಐದು ವರ್ಷಗಳ ಕಾಲ ರಾಜ್ಯ ಸರ್ವ ರೀತಿಯಲ್ಲಿ ಅಭಿವೃದ್ಧಿ ಪರ್ವ ಕಾಣಲು ಸಾಧ್ಯವಾಗುತ್ತದೆ.

ಆದ್ದರಿಂದ, ನಿಮ್ಮ ವಿಧಾನ ಸಭಾ ಕ್ಷೇತ್ರದ ಸೂಕ್ತ ಅಭ್ಯರ್ಥಿಯನ್ನು ಚುನಾಯಿಸಲು ತಪ್ಪದೇ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿರಿ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆ



ಬೆಂಗಳೂರಿನ ದೊಮ್ಮಲೂರಿನಲ್ಲಿರುವ ಬಿಡಿಎ ಹೌಸಿಂಗ್ ಕಾಲೋನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಇದರ ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್ ಮುರಳಿ ಮನೋಹರರವರು ನೆರವೇರಿಸಿದರು. ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು ಹಾಗೂ ಸಂಘದ ನಿರ್ದೇಶಕರುಗಳಾದ ಶ್ರೀ ಹೆಚ್.ಎಸ್. ಪಾಂಡುರಂಗ, ಶ್ರೀ ಜಿ. ಗೋಪಾಲಯ್ಯ, ಶ್ರೀಮತಿ ಲತಾಮಣಿ, ಶ್ರೀ ಜಿ.ದಿವಾಕರ್, ಶ್ರೀ ಎನ್.ಮಹೇಶ, ಸಂಘದ ಕೋ–ಆರ್ಡಿನೇಟರ್ ಶ್ರೀ ಕಶ್ಯಪ್ ಹಾಗೂ ಶ್ರೀ ಜೆ.ಸಿ.ವಿಶ್ವೇಶ್ವರಯ್ಯ ಕಾನೂನು ಸಲಹೆಗಾರರು ಉಪಸ್ಥಿತರಿದ್ದರು.

**ಸುಭಾಷಿತ :** ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರಗಳ ತಂತಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸು ಕೂಡಲ ಸಂಗಮದೇವ! – ಬಸವಣ್ಣ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಜಗತ್ತಿನ ಕಾರ್ಮಿಕ ಶಕ್ತಿಗೆ ನಮಿಸೋಣ


ದೇಶ ಕಟ್ಟುವ ಕಾಯಕದಲ್ಲಿ ಹಗಲಿರುಳು ದುಡಿಯುತ್ತಿರುವ ಕೋಟ್ಯಾಂತರ ಸಂಖ್ಯೆಯ ಕಾರ್ಮಿಕ ಸಮುದಾಯಕ್ಕೆ ಯಾವುದೆ ಜಾತಿ, ಧರ್ಮ, ಭಾಷೆ, ಬಣ್ಣ, ಪ್ರಾಂತ್ಯಗಳ ಭೇದವಿಲ್ಲ. ಕಾಯಕದಲ್ಲಿಯೇ ಕೈಲಾಸ ಕಾಣುವ ಕಾರ್ಮಿಕ ವರ್ಗಕೆ ದುಡಿಮೆಯ ಜಾತಿ, ದುಡಿಮೆಯೆ ದೇವರು ದುಡಿಮೆ ಧರ್ಮ ಹಾಗೂ ದುಡಿಮೆಯೆ ಸರ್ವಸ್ವವೂ ಆಗಿದ್ದು, ಈ ಸಮುದಾಯಕ್ಕೆ ದುಡಿಯಲು ಉತ್ತಮ ಸೌಲಭ್ಯ ಕಲ್ಪಿಸಿಕೊಡುವುದರ ಜೊತೆಗೆ ವೈಜ್ಞಾನಿಕ ರೀತಿಯಲ್ಲಿ ವೇತನ ನಿಗದಿ ಪಡಿಸುವುದು ಹಾಗುಯ ಅವರ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಕಲ್ಪಿಸುವುದು ನಾಗರಿಕ ಸರ್ಕಾರಗಳ ಜವಾಬ್ದಾರಿಯಾಗಿದೆ.

ಯಾವುದೇ ದೇಶ ಎಲ್ಲಾ ಕ್ಷೇತ್ರಗಳಲ್ಲಿ ಸರ್ವತೋಮುಖವಾಗಿ ಸಮಗ್ರ ಅಭಿವೃದ್ಧಿ ಸಾಧಿಸಲು ಆ ದೇಶದಲ್ಲಿರುವ ಗುಣಮಟ್ಟದ ಹಾಗೂ ಕೌಶಲ್ಯದಿಂದ ಕೂಡಿದ ಕಾರ್ಮಿಕ ಶಕ್ತಿಯ ಪಾತ್ರ ಮಹತ್ವವಾದದ್ದು. ಈ ಕಾರ್ಮಿಕ ಶಕ್ತಿಗೆ ಇಂದು ಮಾನವ ಸಂಪನ್ಮೂಲ ಎಂದು ಹೊಸ ಹೆಸರು ನೀಡಲಾಗಿದೆ. ವಿವಿಧ ಕ್ಷೇತ್ರದಲ್ಲಿ ತರಬೇತಿ ಪಡೆದ ಸದೃಢ ಆರೋಗ್ಯವಂತ ಕಾರ್ಮಿಕ ಶಕ್ತಿಯಿಂದಲೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುವ, ಮೂಲಕ ಜಗತ್ತಿನ ಸೂಪರ್ ಪವರ್ ಆಗಬಹುದು.

ಭಾರತ ಜಗತ್ತಿನಲ್ಲಿ ದೊಡ್ಡ ಸಂಖ್ಯೆಯ ಮಾನವ ಸಂಪನ್ಮೂಲ ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ದುಡಿಯುವ ಕೈಗಳಿಗೆ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ದಿನ ನಮನ ಸಲ್ಲಿಸೋಣ.

ಹಗಲು ರಾತ್ರಿ ಎಂದು ನೋಡುವುದಿಲ್ಲ, ಬಿಸಿಲು ಮಳೆ ಗಾಳಿಗೂ ಜಗ್ಗುವುದಿಲ್ಲ, ಕಠಿಣ ಪರಿಶ್ರಮ, ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ... ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು... ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿಯಡಗಿದೆ... ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.

ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಇವರ ಶ್ರಮವನ್ನು ಗುರುತಿಸುವ, ಇವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ವರ್ಕರ್ಸ್ ಡೇ, ಮೇ ಡೇ, ಲೇಬರ್ ಡೇ ಎಂದೂ ಕರೆಯಲಾಗುತ್ತದೆ. 1886ರಲ್ಲಿ ಅಮೇರಿಕಾದಲ್ಲಿ ಮೊದಲ




ಬಾರಿಗೆ ಕಾರ್ಮಿಕರ ದಿನವನ್ನು ಆಚರಿಸಲಾಯಿತು. ದಿನಕ್ಕೆ ಕಾರ್ಮಿಕರಿಗೆ ಎಂಟು ಗಂಟೆ ಕೆಲಸದ ಅವಧಿಯನ್ನು ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಶುರುವಾದ ಚಳವಳಿಗೆ ಯಶಸ್ಸು ಸಿಕ್ಕಿತ್ತು. ಇದೇ ಹೋರಾಟದ ಕಿಚ್ಚಿನಲ್ಲಿ ಉದಯಿಸಿದ್ದೇ ಕಾರ್ಮಿಕರ ದಿನಾಚರಣೆ. ಭಾರತದಲ್ಲಿ ಈ ಆಚರಣೆ ಶುರುವಾಗಿದ್ದು 1923ರಲ್ಲಿ. ವಿಶ್ವದ ನಾನಾ ಭಾಗಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಮೂಲಕ ಶ್ರಮಜೀವಿಗಳಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ. ಹೀಗಾಗಿ, ಈ ದಿನದಂದು ಎಲ್ಲಾ ಶ್ರಮಜೀವಿಗಳಿಗೆ ಕಳುಹಿಸಿಕೊಡುವಂತಹ ಶುಭ ಸಂದೇಶಗಳು ಇಲ್ಲಿವೆ.

- ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವ ದಿನ ಇದು.
- ದೇಶದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವ ಶ್ರಮಜೀವಿಗಳೆ ದೇಶದ ನಿಜವಾದ ಆಸ್ತಿ.
- ಒಬ್ಬ ಕಾರ್ಮಿಕ ಅದ್ಭುತಗಳ ನಿರ್ಮಾತೃ ಮತ್ತು ಪ್ರತಿ ರಾಷ್ಟ್ರಕ್ಕೂ ದೊಡ್ಡ ಆಸ್ತಿ.
- ದುಡಿಮೆ ಮನುಷ್ಯನ ಘನತೆ ಮತ್ತು ಸೃಜನಶೀಲತೆಯ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ ಏಣಿ.
- ಜೀವನದ ಕಠಿಣ ಸವಾಲುಗಳನ್ನೂ ಮೆಟ್ಟಿ ನಿಂತು ಪರಿಶ್ರಮದಲ್ಲಿಯೇ ಬದುಕಿನ ಖುಷಿ ಕಾಣುವ ಎಲ್ಲ ಕಾರ್ಮಿಕರೆ ದೇಶದ ನಿಜವಾದ ಆಸ್ತಿ
- ಕಾರ್ಮಿಕರೇ ಈ ದೇಶದ ಆಸ್ತಿ. ಕಾರ್ಮಿಕರೇ ಕಠಿಣ ಪರಿಶ್ರಮಕ್ಕೆ ಸ್ಫೂರ್ತಿ. ಕಾರ್ಮಿಕರ ದುಡಿಮೆಯಲ್ಲಡಗಿದೆ ದೇಶದ ಅಭಿವೃದ್ಧಿ.

2020–21ನೇ ಸಾಲಿನಲ್ಲಿ ರಾಷ್ಟ್ರೀಯ ಅಂಕಿ ಅಂಶಗಳ ಕಛೇರಿ **(National Statistical Office)**ಯು ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಾದ್ಯಂತ ಸುಮಾರು 38 ಕೋಟಿಗೂ ಅಧಿಕ ಕಾರ್ಮಿಕರು ಅಸಂಘಟಿತ ವರ್ಗಗಳಲ್ಲಿ ತೊಡಗಿಕೊಂಡಿರುತ್ತಾ–



ರೆ. ಪ್ರಸ್ತುತ ಅಸಂಘಟಿತ ಕಾರ್ಮಿಕರ ಕೇಂದ್ರೀಕೃತ ದತ್ತಾಂಶ ಲಭ್ಯವಿರುವುದಿಲ್ಲ. ಅಂತಹ ಕೇಂದ್ರೀಕೃತ ದತ್ತಾಂಶದ ಅಲಭ್ಯತೆಯ ಕಾರಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ, ವಲಸೆ ಕಾರ್ಮಿಕರು ಹಾಗೂ ಕಟ್ಟಡ ಕಾರ್ಮಿಕರು ಸೇರಿದಂತೆ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೋಪಾಯ ಕಲ್ಪಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಅಸಂಘಟಿತ ಹಾಗೂ ವಲಸೆ ಕಾರ್ಮಿಕರ ಸಮಗ್ರ ದತ್ತಾಂಶವು ಅವರಿಗೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ವಿಸ್ತರಿಸಲು ಸಹಾಯಕವಾಗಿರುತ್ತದೆ. ಕಾರ್ಮಿಕ ವರ್ಗಗಳಲ್ಲಿ ಅತ್ಯಂತ ದುರ್ಬಲ ವರ್ಗದವರಾದ ವಲಸೆ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ಸಮಗ್ರ ದತ್ತಾಂಶವನ್ನು ಸಿದ್ಧಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆ.

### 2050 ನಂತರ ಭಾರತದ ಕಾರ್ಮಿಕರ ಸಂಖ್ಯೆಯಲ್ಲಿ ಇಳಿಕೆ

ಭಾರತದ ಜನಸಂಖ್ಯೆಯನ್ನು 0–14, 15–24, 25–59, 60 ಮೇಲ್ಪಟ್ಟ ವಯಸ್ಸು ಎಂದು ವಿಭಾಗಿಸಿ ನೋಡಿದಾಗ ಭಾರತ 2050ರವರೆಗೆ ಹೆಚ್ಚಿನ ಪ್ರಮಾಣದಲ್ಲಿ ದುಡಿಯುವ ವರ್ಗವನ್ನು ಹೊಂದಲಿದೆ. ಆದರೆ 2050ರ ಬಳಿಕ ದುಡಿಯುವ ವರ್ಗದ ಪ್ರಮಾಣ ಕಡಿಮೆಯಾಗಲಿದೆ. ಇದು ಪ್ರಸಕ್ತ ಯುರೋಪ್ ಎದುರಿಸುತ್ತಿರುವ ದುಡಿಯುವ ವರ್ಗದ ಕಡಿಮೆ ಅನುಪಾತಕ್ಕೆ ತಾಳೆಯಾಗಲಿದೆ. ಭವಿಷ್ಯದಲ್ಲಿ ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಬಗ್ಗೆ ಆರ್ಥಿಕ ತಜ್ಞರು ಚಿಂತನೆ ನಡೆಸಬೇಕಿದೆ.

ಸಾಮಾನ್ಯವಾಗಿ ದುಡಿಯುವ ವರ್ಗದ ಜನರಲ್ಲಿ 40–45 ವರ್ಷದವರೆಗೆ ಹೆಚ್ಚಿನ ಉಳಿತಾಯ ಇರುತ್ತದೆ. ಬಳಿಕ ಉಳಿತಾಯದ ಪ್ರಮಾಣ ಕಡಿಮೆಯಾಗುತ್ತದೆ. ಯುರೋಪ್ ದೇಶಗಳಲ್ಲಿ ಬಹುತೇಕ 60 ವರ್ಷದ ಬಳಿಕ ದುಡಿಮೆ ನಿಂತು ಹೋಗುತ್ತದೆ. ಆದರೆ ಭಾರತದಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿರುವ ಕಾರಣ ದುಡಿಮೆ 80–90 ವರ್ಷದವರೆಗೂ ಇರುತ್ತದೆ.



ಭಾರತದಲ್ಲಿ ಕಾರ್ಮಿಕರನ್ನು ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರೆಂದು ವಿಭಾಗಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸ್ವಾಮ್ಯದ ಅಡಿ ದುಡಿಯುವ ಕಾರ್ಮಿಕರು ಬಹುತೇಕ ಸಂಘಟಿತ ಕಾರ್ಮಿಕರಾಗಿದ್ದು, ದೇಶದಲ್ಲಿ ಕೇವಲ ಪ್ರತಿಶತ 12 ರಿಂದ 15 ರವರೆಗೆ ಮಾತ್ರ ಕಂಡು ಬಂದಿದ್ದು ತಮ್ಮ ಸಂಘಟಿತ ಹೋರಾಟದ ಮೂಲಕ ಬೇಡಿಕೆಗಳನ್ನು ತಕ್ಕ ಮಟ್ಟಿಗೆ ಈಡೇರಿಸಿಕೊಳ್ಳುತ್ತಿದ್ದರೆ. ಇನ್ನೂಳಿದ ಶೇ 85 ರಷ್ಟು ಕಾರ್ಮಿಕರು, ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಭೂ ರಹಿತ ಮಹಿಳೆ ಹಾಗೂ ಪುರುಷ ಕಾರ್ಮಿಕರು ನಗರಗಳಲ್ಲಿ ಹೋಟೆಲ್‌ಗಳಲ್ಲಿ ದುಡಿಯುವ ಕಾರ್ಮಿಕರು, ಸಣ್ಣ ಉದ್ದಿಮೆಗಳಲ್ಲಿ ದುಡಿಯುವವರು, ಈ ಮುಂತಾದ ಕ್ಷೇತ್ರಗಳಲ್ಲಿ ದುಡಿವ ಕೆಲಸಗಾರರು ಅಸಂಘಟಿತ ಕಾರ್ಮಿಕರು.

ಇವರಿಗೆ ಮೂಲತಃ ನಿರ್ದಿಷ್ಟ ಕೂಲಿ ಎಂಬುದೇ ಗಗನ ಕುಸುಮವಾಗಿದ್ದು ತೀವ್ರತರ ಶೋಷಣೆಗೆ ಒಳಪಟ್ಟಿದ್ದಾರೆ. ಇಂತಹ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರ 1949ರಲ್ಲಿ ಕನಿಷ್ಠ ಕೂಲಿ ಕಾಯ್ದೆಯನ್ನು ಜಾರಿಗೆ ತಂದಿದ್ದು, ಆ ಕಾಯ್ದೆಯು ಬಹುತೇಕವಾಗಿ ಹಲ್ಲಿಲ್ಲದ ಕಾಯ್ದೆಯಾಗಿದ್ದು ಪರಿಪೂರ್ಣವಾಗಿ ಜಾರಿಯಲ್ಲಿ ತರಲು ಸಾಧ್ಯವಾಗಿಲ್ಲ.

ಒಟ್ಟಾರೆ ಭಾರತದಲ್ಲಿ ಕಾರ್ಮಿಕರು ಶೋಷಣೆಯಲ್ಲೇ ಬದುಕು ಸಾಗಿಸುತ್ತಿದ್ದು ಶ್ರಿಮಂತರು ಶ್ರೀಮಂತರಾಗಿಯೇ ಮುಂದುವರೆದರೆ ಬಡವರು ಬಡವರಾಗಿಯೇ ಸಾಗುತ್ತಿದ್ದಾರೆ. ಇಂತಹ ಶೋಷಣೆಯ ವಿರುದ್ಧ ಕಾರ್ಮಿಕ ಒಕ್ಕೂಟಗಳಲ್ಲಿ ಐಕ್ಯತೆಯನ್ನು ಕಾಪಾಡಿಕೊಂಡು ಹೋರಾಟ ಮಾಡಲು ಸದಕಾಲ ಶ್ರಮಿಸುತ್ತಿರಬೇಕು. ಆಗ ಶೋಷಣೆ ನಿಲ್ಲುತ್ತದೆ. ಇದು ಕೇವಲ ಕಾರ್ಮಿಕರ ಐಕ್ಯತೆಯಿಂದ ಮಾತ್ರ ಸಾಧ್ಯ.

ಸಂಘಟಿತರೊಂದಿಗೆ ಅಸಂಘಟಿತ ಕಾರ್ಮಿಕರು ಸೇರಿ ಐಕ್ಯತೆಯಿಂದ ಒಕ್ಕೂಟ ರಚಿಸಿ ಆ ಮೂಲಕ ತಮ್ಮ ಬದುಕನ್ನು ಹಸನಾಗಿ ಮಾಡಿಕೊಳ್ಳಲಿ.

**ಸವಿತಾ ನಾಯ್ಕ್,**
**ಬೆಂಗಳೂರು.**



# ಸಹಕಾರ ಸಂಘಗಳು ವರ್ಷಾಂತ್ಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು

▸▸ ಶಶಿಧರ ಎಲೆ. ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.

**ಪತ್ತಿನ ಸಹಕಾರ ಸಂಘಗಳಲ್ಲಿ ಬಂಡವಾಳ ವೃದ್ಧಿಗಾಗಿ ಸಹಕಾರ ಸಂಘಗಳಲ್ಲಿ ನೀಡಿದ ಸಾಲದ ಶೇ. 5–10 ರಷ್ಟು ಹೆಚ್ಚುವರಿ ಷೇರು ಸಂಗ್ರಹಣೆ ರೂಢಿಯಲ್ಲಿದೆ. ಮಾರ್ಚ್ ಮಾಹೆಯಲ್ಲಿ ಸಾಲ ತೀರುವಳಿಯಾಗುವಾಗ ಹೆಚ್ಚುವರಿ ಷೇರನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಇದರಿಂದ ಪಾವತಿಯಾದ ಷೇರು ಬಂಡವಾಳ ತಗ್ಗುತ್ತದೆ. ಆದಷ್ಟೂ ಆ ಷೇರನ್ನು ಸಂಘದಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸುವುದು. ಸಾಲ ನವೀಕರಿಸುವುದು ಅಥವಾ ನೂತನ ಸಾಲಗಳನ್ನು ವಿತರಿಸುವುದರಿಂದ ಹೆಚ್ಚುವರಿ ಷೇರು ಸಂಗ್ರಹಣೆ ಸಾಧ್ಯವಾಗುತ್ತದೆ. ಪಾವತಿಸಿದ ಷೇರು ಬಂಡವಾಳ 'ಸ್ವಂತ ನಿಧಿ'ಯ ಭಾಗವಾಗುವುದರಿಂದ ಇದರ ಹೆಚ್ಚಳದಿಂದ (ಸಿ.ಆರ್.ಎ.ಆರ್.) ಸಮರ್ಪಕ ಬಂಡವಾಳ ಹೊಂದಲು ಸಾಧ್ಯವಾಗುತ್ತದೆ.**

ಸಹಕಾರ ಸಂಘಗಳಿಗೆ ಮಾರ್ಚ್ ತಿಂಗಳು ತನ್ನ ಆರ್ಥಿಕ ವರ್ಷ (ಸಹಕಾರ ವರ್ಷ)ದ ಅಂತಿಮ ತಿಂಗಳು. ಈ ತಿಂಗಳು ಕಳೆಯುತ್ತಿದ್ದಂತೆ ಆರ್ಥಿಕ ವರ್ಷ ಮುಗಿಯುತ್ತದೆ. ಆರ್ಥಿಕ ವರ್ಷ ಮುಗಿಯುವ ಮುನ್ನ ತನ್ನ ಆರ್ಥಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ತನ್ನ ಸದಸ್ಯರಿಗೆ ತನ್ನ ಕಾರ್ಯಚರಣೆ ಬಗ್ಗೆ ತಿಳಿಸಲು ಸಂತಸವಾಗುವಂತಾಗಲು ಕೆಲವು ಕ್ರಮಗಳನ್ನು ಈಗಲೇ ಕೈಗೊಳ್ಳಬೇಕು. ಅವುಗಳ ಅವಲೋಕನ ಕೈಗೊಂಡು ಸಕಾಲದಲ್ಲಿ ಚಿಕಿತ್ಸಾ ಕ್ರಮ ಕೈಗೊಂಡರೇ ಮಾತ್ರ ಸಾಧ್ಯ.

**1. ಸಾಲ ವಸೂಲಾತಿ :** ಪತ್ತಿನ ಚಟುವಟಿಕೆಯುಳ್ಳ ಸಹಕಾರ ಸಂಘಗಳಲ್ಲಿ ತಮ್ಮ 'ಆಸ್ತಿ ಜವಾಬ್ದಾರಿ' ತಃಖ್ತೆಯಲ್ಲಿನ ಪ್ರಮುಖ ಆಸ್ತಿ. ಸಾಲಗಳು ಮತ್ತು ಮುಂಗಡಗಳು, ಇದರ ಆರೋಗ್ಯ ಅತ್ಯಂತ ಮಹತ್ವ ಪೂರ್ಣವಾದದ್ದು. ಇದರ ಷೆಡ್ಯೂಲ್, ಕುಳುವಾರು ಬಾಕಿ ಪಟ್ಟಿಯ ಪರಿಶೀಲನೆ ಅತ್ಯಂತ ಅವಶ್ಯಕ, ಸದರಿ ಷೆಡ್ಯೂಲ್ ಗೂ ಆಸ್ತಿ ಜವಾಬ್ದಾರಿ ತಖ್ತೆಯಲ್ಲಿನ ಮೊತ್ತಕ್ಕೂ ತಾಳೆಯಾಗಬೇಕು. ವ್ಯತ್ಯಾಸಗಳಿದ್ದಲ್ಲಿ ಅದಕ್ಕೆ ಕಾರಣವನ್ನು ಕಂಡು ಹಿಡಿಯ ಬೇಕು. ಅನೇಕವೇಳೆ 'ಬೇನಾಮಿ ಸಾಲಗಳು' ದುರುಪಯೋಗಗಳು, ದುರ್ವಿನಿಯೋಗಗಳು ಇದರಲ್ಲಿ ಹುದುಗಿರುತ್ತವೆ. ಅಮಾನತ್ (suspense) ಅಮಾನತ್ ಆಗಿ ಉಳಿಯ ಬಾರದು. ಸದರಿ ಆಸ್ತಿಯ ವಿಂಗಡನೆ ಬಹಳ ಮುಖ್ಯ. ವಿಂಗಡನೆ ಮಾಡುವ ಮುನ್ನ ಸಾಲದ ಬೇಡಿಕೆ ವಸೂಲಿ ಬಾಕಿ ಪರಿಶೀಲನೆ ಬಹಳ ಮುಖ್ಯ. ಸಕಾಲದಲ್ಲಿ ಸಾಲ ವಸೂಲಿಯಾಗುತ್ತಿದ್ದಲ್ಲಿ, ಗಡುವು ಮೀರದಿದ್ದಲ್ಲಿ, ಸುಸ್ತಿಯಾಗದಿದ್ದಲ್ಲಿ ಯಾವುದೇ ಕ್ರಮದ ಅಗತ್ಯವಿಲ್ಲ. ಆದರೆ ವಸೂಲಾತಿಯಾದ ಬಡ್ಡಿ, ಮೊತ್ತ ಮತ್ತು ದರದ ಪರಿಶೀಲನೆ ಅಗತ್ಯ. ಇದರಿಂದ ಸೋರಿಕೆ ತಡೆಗಟ್ಟಬಹುದು.

ಒಂದು ಸಮಯ ತಪ್ಪು ಸಂಭವಿಸಿದ್ದಲ್ಲಿ ಸರಿಪಡಿಸಲು ಇದು ಸೂಕ್ತ ಸಮಯ. ಸುಸ್ತಿಯಾಗಿದ್ದಲ್ಲಿ ತಿಳುವಳಿಕೆ ನೋಟಿಸು ನೀಡುವ ಮೂಲಕ ಮುಂದಿನ ವಸೂಲಿ ಕ್ರಮಗಳನ್ನು ಕೈಗೊಂಡಲ್ಲಿ ಮೊತ್ತ ವಸೂಲಿಯಾದಲ್ಲಿ ಬಡ್ಡಿ ಆದಾಯ ಈ ವರ್ಷದ ಆರ್ಥಿಕ ವರ್ಷಕ್ಕೆ ಬರುತ್ತದೆ. ಸುಸ್ತಿ ಸಾಲಗಳ ಮೇಲೆ ವಸೂಲಿ ಕ್ರಮಗಳನ್ನು ಕೈಗೊಳ್ಳುವುದರಿಂದ ಅಧಿಕ ಬಡ್ಡಿ ಆದಾಯಕ್ಕೆ ಅವಕಾಶವಾಗುತ್ತದೆ. ಸಾಲಗಳು ವಸೂಲಾತಿಯಾಗದಿದ್ದಲ್ಲಿ ಸಂಘದ ಆಸ್ತಿ ಜವಾಬ್ದಾರಿ ತಖ್ತೆಯ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತವೆ. ಉತ್ತಮ ಗುಣಮಟ್ಟದ ಆಸ್ತಿಯು ಕಡಿಮೆ ಗುಣಮಟ್ಟಕ್ಕೂ, ಕಡಿಮೆ ಗುಣಮಟ್ಟದ ಆಸ್ತಿಯು ಅನುಮಾನಸ್ಪದ ಆಸ್ತಿಗೆ ಜಾರುತ್ತದೆ. ಅದರಲ್ಲಿ ಅನುಮಾನಸ್ಪದ (ಡಿ.1) 1 ಇದ್ದದ್ದು 2 (ಡಿ.2) ಮತ್ತು 3 (ಡಿ.3) ಕ್ಕೆ ಜಾರುತ್ತದೆ. ಇದರಿಂದ ಅಂತಿಮ ಲೆಕ್ಕ ತಯಾರಿಸುವಾಗ ಲಾಭನಷ್ಟ ತಃಖ್ತೆಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಬೇಕಾಗುತ್ತದೆ. ಇದರಿಂದ ನಿವ್ವಳ ಲಾಭವು ಕಡಿಮೆಯಾಗುತ್ತದೆ. ಅಥವಾ ನಿವ್ವಳ ನಷ್ಟದಲ್ಲಿದ್ದಲ್ಲಿ ನಿವ್ವಳ ನಷ್ಟ ಮತ್ತಷ್ಟು ಹೆಚ್ಚಾಗುತ್ತದೆ. ಆಸ್ತಿಯ ಕಳಪೆ ಮಟ್ಟ ಹೆಚ್ಚುವುದರಿಂದ ಅದರ ಮೇಲಿನ ತೊಡಕು ತೂಕ (Risk weight) ಅಧಿಕಗೊಳ್ಳುತ್ತದೆ. ಇದರಿಂದ ಸಮರ್ಪಕ ಬಂಡವಾಳ (ತೊಡಕು ತೂಕ ಸಹಿತ ಆಸ್ತಿಗೆ ಸ್ವಂತ ಬಂಡವಾಳದ ಅನುಪಾತ) (CRAR - capital adequacy) ಕಡಿಮೆಯಾಗುತ್ತದೆ. ಇದರಿಂದ ತಾನು ಸಾಲ ತರುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸಹಕಾರ ಸಂಸ್ಥೆಗಳಲ್ಲಿ ಇದು ಕನಿಷ್ಟ ಶೇ.9 ಇರಬೇಕು ಎಂದು ನಿರೀಕ್ಷಿಸಲಾಗಿದೆ.

ಮತ್ತೊಂದು ಗಮನಕ್ಕೆ ತೆಗೆದುಕೊಳ್ಳಬೇಕಾದ ಅಂಶವೆಂದರೆ, ಮಾರ್ಚ್ ಅಂತ್ಯಕ್ಕೆ ಠೇವಣಿಗಳ ಮೇಲೆ ಮತ್ತು ಪಡೆದ ಸಾಲಗಳ ಮೇಲೆ ಬಡ್ಡಿ ಪಾವತಿಸಬೇಕಾಗುತ್ತದೆ. ಒಂದು ಸಮಯ ಪಾವತಿಸದಿದ್ದರೂ ಅದಕ್ಕೆ ಲಾಭನಷ್ಟ ಖಾತೆಯಲ್ಲಿ ಅವಕಾಶ ಕಲ್ಪಿಸಲೇ ಬೇಕು. ಇದರಿಂದ ನಿಧಿಗಳ ಮೇಲಿನ ವೆಚ್ಚ ಅಧಿಕ ಗೊಳ್ಳುತ್ತದೆ ಮತ್ತು ಆಸ್ತಿಯ ಮೇಲಿನ ಗಳಿಕೆ ಕಡಿಮೆಯಾಗಿ ಅಂತರವು ಕುಗ್ಗುತ್ತದೆ. ಸಂಘವು ನಷ್ಟವನ್ನು

ಅನುಭವಿಸುತ್ತದೆ. ಆದುದರಿಂದ ವಿಳಂಬವಿಲ್ಲದೇ ಸುಸ್ತಿ ಸಾಲಗಳ ಮತ್ತು ದುಡಿಯಲಾರದ ಆಸ್ತಿ (ಎನ್.ಪಿ.ಎ) ಆಸ್ತಿಗಳನ್ನು ಪ್ರತಿ ಲೆಕ್ಕವಾರು ಪರಿಶೀಲಿಸಿ ಪ್ರತಿ ಸಾಲಗಾರ ಮೇಲೆ ತುರ್ತು ಕ್ರಮ ಕೈಗೊಂಡು ಬಡ್ಡಿ ಸಹಿತ ಸಾಲವನ್ನು ವಸೂಲಿ ಮಾಡಬೇಕು. ಆಸ್ತಿಯ ಗುಣಮಟ್ಟ ಏರುಗತಿಯಲ್ಲಿರಬೇಕು ವಿನಃ ಕೆಳಗೆ ಇಳಿಯುವಂತಾಗಬಾರದು.

**2) ಹೂಡಿಕೆಗಳು :** ಹೂಡಿಕೆಗಳ ಲೇಖನ ಪತ್ರಗಳು, ದೃಢೀಕರಣಗಳು, ಇವುಗಳ ಪರಿಶೀಲನೆ. ಇವುಗಳು ಸಂಘದಲ್ಲಿ ಇದಕ್ಕಾಗಿ ಇರಿಸಿರುವ ರಿಜಿಸ್ಟರ್‌ನಲ್ಲಿ ದಾಖಲಾಗಿವೆ ಎಂಬುದನ್ನು ಖಾತ್ರಿ ಗೊಳಿಸಿಕೊಳ್ಳಬೇಕು. ಇವುಗಳ ಮೇಲೆ ಬರಬೇಕಾಗಿರುವ ಬಡ್ಡಿ, ಡಿವಿಡೆಂಡ್, ಇವುಗಳು ಮಾರ್ಚ್ ಅಂತ್ಯದೊಳಗೆ ಜಮೆ ಆಗುವಂತೆ ನೋಡಿಕೊಳ್ಳುವುದು. ಅದಕ್ಕೆ ಬೇಕಾದ ಪತ್ರ ವ್ಯವಹಾರ, ತಿಳುವಳಿಕೆ ನೀಡುವ ಕ್ರಮಗಳನ್ನು ಕೈಗೊಳ್ಳುವುದು. ಸಹಕಾರ ಸಂಘಗಳಲ್ಲಿ ಕ್ರೋಢೀಕೃತ ಬಡ್ಡಿ (accrued intrest), ಆದಾಯವನ್ನು ಆದಾಯವೆಂದು ಪರಿಗಣಿಸಲು ಬರುವುದಿಲ್ಲ. ಆ ವರ್ಷದಲ್ಲಿ ಜಮೆ ಆದ ಆದಾಯವನ್ನು ಮಾತ್ರ ಲಾಭಕ್ಕೆ ತೆಗೆದುಕೊಳ್ಳಬಹುದು.

**3) ಚರ ಸ್ಥಿರ ಆಸ್ತಿಗಳು ಮತ್ತು ನಿಧಿಯೇತರ ಆದಾಯ ಮೂಲಗಳು :** ನಿಧಿಯೇತರ ವ್ಯವಹಾರಗಳನ್ನು ಮಾಡುತ್ತಿದ್ದಲ್ಲಿ ಒಂದು ಸಮಯ ಬರಬೇಕಾಗಿದ್ದ ಬಾಡಿಗೆಗಳು, ಏಜೆನ್ಸಿ ಕಮಿಷನ್ ಮುಂತಾದ ಆದಾಯಗಳನ್ನು ಸಂಬಂಧಿಸಿದವರನ್ನು ಸಂಪರ್ಕಿಸಿ ಅವುಗಳನ್ನು ಸಂದಾಯ ಮಾಡಿಸಿಕೊಳ್ಳತಕ್ಕದ್ದು, ಯಾವುದೇ ಕಾರಣಕ್ಕೆ ಬಾಕಿ ಉಳಿಯದಂತೆ ನೋಡಿಕೊಳ್ಳುವುದು. ಖರೀದಿ ಮಾರಾಟ, ಗೊಬ್ಬರ, ಬಿತ್ತನೆ ಬೀಜ, ಔಷಧ, ಕೀಟನಾಶಕಗಳು ಇತರೆ; ಬಟ್ಟೆ, ದಿನಪಯೋಗಿ ವಸ್ತುಗಳು, ಪಡಿತರ, ಕಿರಾಣಿ, ಇತರೆ, ವಸ್ತುಗಳ ದಾಸ್ತಾನನ್ನು ನಿಖರವಾಗಿ ಪರಿಶೀಲಿಸುವದು. ಪುಸ್ತಕದಲ್ಲಿನ ದಾಸ್ತಾನು ಮತ್ತು ನೈಜ ದಾಸ್ತಾನು ತಾಳೆಯಾಗತಕ್ಕದ್ದು. ಹಾಳಾದ, ಬಿಕರಿಯಾಗದ ದಾಸ್ತಾನುಗಳನ್ನು ನಷ್ಟವೆಂದು ಪರಿಗಣಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು, ಖರೀದಿ ದರವನ್ನು ಅಗತ್ಯತೆಗನುಸಾರ ಸವಕಳಿಯನ್ನು ತೆಗೆದು ವ್ಯಾಪಾರ ತಖ್ತೆ ತಯಾರಿಸುವುದು. ನಷ್ಟ, ಸೋರಿಕೆ, ದುರುಪಯೋಗಗಳಾಗಿದ್ದಲ್ಲಿ ವಸೂಲಿ ಕ್ರಮ ಮಾರ್ಚ್ ಒಳಗೆ ಕೈಗೊಳ್ಳುವುದು. ಇದರಿಂದ ನಿಖರವಾದ ವ್ಯಾಪಾರ ಲಾಭವನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ಇತರೆ ಚರ ಸ್ಥಿರ ಆಸ್ತಿಗಳ ಮೇಲೆ ಅದರ ಜೈವಿತಾಧಾರದ ಮೇಲೆ ಲಾಭ ನಷ್ಟ ತಃಖ್ತೆಯಲ್ಲಿ 'ಸವಕಳಿ' (depriciation) ತೆಗೆಯಬೇಕು. ಇದರಿಂದ ಆಸ್ತಿ – ಜವಾಬ್ದಾರಿ ತಃಖ್ತೆಯಲ್ಲಿ ನೈಜ ನಿವ್ವಳ ಲಾಭ ಪ್ರತಿಬಿಂಬಿಸಿದಂತಾಗುತ್ತದೆ.

**4) ಷೇರು ಬಂಡವಾಳ :** ಪತ್ತಿನ ಸಹಕಾರ ಸಂಘಗಳಲ್ಲಿ ಬಂಡವಾಳ ವೃದ್ಧಿಗಾಗಿ ಸಹಕಾರ ಸಂಘಗಳಲ್ಲಿ ನೀಡಿದ ಸಾಲದ ಶೇ. 5–10 ರಷ್ಟು ಹೆಚ್ಚುವರಿ ಷೇರು ಸಂಗ್ರಹಣೆ ರೂಢಿಯಲ್ಲಿದೆ. ಮಾರ್ಚ್ ಮಾಹೆಯಲ್ಲಿ ಸಾಲ ತೀರುವಳಿಯಾಗುವಾಗ ಹೆಚ್ಚುವರಿ ಷೇರನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ಇದರಿಂದ ಪಾವತಿಯಾದ ಷೇರು ಬಂಡವಾಳ ತಗ್ಗುತ್ತದೆ. ಆದಷ್ಟೂ ಆ ಷೇರನ್ನು ಸಂಘದಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸುವುದು. ಸಾಲ ನವೀಕರಿಸುವುದು ಅಥವಾ ನೂತನ ಸಾಲಗಳನ್ನು ವಿತರಿಸುವುದರಿಂದ ಹೆಚ್ಚುವರಿ ಷೇರು ಸಂಗ್ರಹಣೆ ಸಾಧ್ಯವಾಗುತ್ತದೆ. ಪಾವತಿಸಿದ ಷೇರು ಬಂಡವಾಳ 'ಸ್ವಂತ ನಿಧಿ'ಯ ಭಾಗವಾಗುವುದರಿಂದ ಇದರ ಹೆಚ್ಚಳದಿಂದ (ಸಿ.ಆರ್.ಎ.ಆರ್.) ಸಮರ್ಪಕ ಬಂಡವಾಳ ಹೊಂದಲು ಸಾಧ್ಯವಾಗುತ್ತದೆ.

**5) ನಿಧಿಗಳು :** ಕಾಯ್ದಿರಿಸಿದ (ಮೀಸಲು) ನಿಧಿಗಳು ಸಮರ್ಪಕ ಬಂಡವಾಳದ ಭಾಗವಾಗುತ್ತದೆ. ಇವುಗಳನ್ನು ಬೇರೆ ಉದ್ದೇಶಗಳಿಗೆ ಬಳಸದೆ ಪ್ರತ್ಯೇಕ ಹೂಡಿಕೆ ಮಾಡುವುದರಿಂದ ಋಣಭಾರವಿಲ್ಲದ ನಿಧಿಗಳ ಕಾಪಾಡುವಿಕೆಯಿಂದ ಸಮರ್ಪಕ ಬಂಡವಾಳದ ಹೆಚ್ಚಳಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಆಪದ್ಧನ ನಿಧಿಗಳನ್ನು ಇತರೆ ಉದ್ದೇಶಗಳಿಗೆ ಬಳಸಬಾರದು.

**6) ಠೇವಣಿಗಳು :** ಠೇವಣಿಗಳ ಮೇಲೆ ಬಡ್ಡಿ ಪಾವತಿಸುವುದಿದ್ದರೆ ಪಾವತಿಸುವುದು. ಒಂದು ಸಮಯ ಪಾವತಿಸಲಾಗದಿದ್ದಲ್ಲಿ ಅವಕಾಶವನ್ನು ಕಲ್ಪಿಸಬೇಕು. ಇದರಿಂದ ನೈಜ ಖರ್ಚು, ನೈಜವೆಚ್ಚದ ಅರಿವಾಗುತ್ತದೆ. ನೈಜ ನಿವ್ವಳ ಲಾಭ ಪ್ರತಿ ಬಿರ್ಭವಾಗುತ್ತದೆ.

**7) ಪಡೆದ ಸಾಲಗಳು :** ಪಡೆದ ಸಾಲದ ಮೇಲಿನ ಬಡ್ಡಿ ಪಾವತಿಸುವುದು. ಪಾವತಿಸುವುದು ಇಲ್ಲದಿದ್ದಲ್ಲಿ ಪಾವತಿಸುವ ಬಗ್ಗೆ ಅವಕಾಶ ಕಲ್ಪಿಸಬೇಕು. ಇದರಿಂದ ನೈಜ ನಿವ್ವಳ ಲಾಭ ಪ್ರತಿಬಿಂಬಿಸಲಾಗುತ್ತದೆ.

ಈ ಮೇಲಿನ ಅಂಶಗಳನ್ನು 'ಮಾರ್ಚ್' ಆರ್ಥಿಕ ವರ್ಷದ ಕಡೆಯ ಮಾಸದಲ್ಲಿ ಕೈಗೊಂಡರೆ ಮತ್ತು ಮಾರ್ಚ್ ಆದ ನಂತರ 'ಅಂತಿಮ ಲೆಕ್ಕ' ಗಳನ್ನು ಅಂತಿಮಗೊಳಿಸಲು ಸಾಧ್ಯವಾಗುತ್ತದೆ. ಸಹಕಾರ ಸಂಘಗಳು ಗಣಕೀಕರಣವಾಗಿರುವುದರಿಂದ ಅಂದಿನ ಲೆಕ್ಕಗಳು ಅಂದಿಗೆ ಅಂತ್ಯವಾಗುತ್ತವೆ. ಆದುದರಿಂದ ಆರ್ಥಿಕ ವರ್ಷದ ಕೊನೆಯ ಮಾಸವಾದ 'ಮಾರ್ಚ್' ಮಾಸ ಅತ್ಯಂತ ಪ್ರಮುಖ ಮಾಸವಾಗುತ್ತದೆ. ಕಾಲ ಕಳೆದವನ್ನು ಹಿಂತಿರುಗಿ ಪಡೆಯಲಾಗುವುದಿಲ್ಲ ಎಂಬ ಅರಿವು ತದ ನಂತರ ಅರಿಯುವ ಬದಲಿಗೆ ಮುಂಚೆಯೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಸಂಘದ 'ಆರೋಗ್ಯಕರ' ಆಸ್ತಿ ಜವಾಬ್ದಾರಿ ತಃಖ್ತೆ ನಿರ್ಮಾಣ ಸಾಧ್ಯ. ಇದರಿಂದ ಸದಸ್ಯರಿಗೆ ಸಂಘದ ನೈಜ ಆರ್ಥಿಕ ಚಿತ್ರಣ ಒದಗಿಸುವುದಲ್ಲದೆ ನೈಜ 'ಲಾಭಾಂಶ' ವಿತರಿಸಬಹುದು. ಸಹಕಾರ ಸಂಘವನ್ನು ದೀರ್ಘಾವಧಿಯಲ್ಲಿ ಪೋಷಿಸಬಹುದು.

**ನೈತಿಕ ಪ್ರವೃತ್ತಿ ಎಷ್ಟು ಉನ್ನತವಾಗಿರುತ್ತದೋ ಉನ್ನತಿಯೂ ಅಷ್ಟೇ ಎತ್ತರದ್ದಾಗಿರುತ್ತದೆ.**

**– ಸ್ವಾಮಿ ವಿವೇಕಾನಂದ**

# ದೇಶದ ಸಹಕಾರ ಚಳವಳಿಯ ಬೆಳವಣಿಗೆಗೆ ವಿಶೇಷ ಆದ್ಯತೆ – ಅಮಿತ್ ಶಾ



**ಬೆಂಗಳೂರು** : ಸಹಕಾರ ಇಲಾಖೆ ಮತ್ತು ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಮಾರ್ಚ್ 24ರಂದು ಬೆಂಗಳೂರಿನಲ್ಲಿ ಉದ್ಘಾಟಿಸಿದರು.

ಒಂದು ಲಕ್ಷಕ್ಕೂ ಅಧಿಕ ಜನರು, ಸಹಕಾರಿಗಳು ಭಾಗವಹಿಸಿದ್ದ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ ಅವರು "ಸಹಕಾರದಿಂದ ಸಮೃದ್ಧಿ" ಪರಿಕಲ್ಪನೆಯಲ್ಲಿ ದೇಶದ ಸಹಕಾರ ಚಳವಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರು ಸಹಕಾರ ವಲಯದ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡಿದ್ದಾರೆ ಎಂದರು.

ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಚೆಕ್ಕುಗಳನ್ನು ವಿತರಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೈತರಿಗೆ ಸಹಕಾರ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿದರದಲ್ಲಿ ನೀಡಲಾಗುವ ಬೆಳೆಸಾಲದ ಮಿತಿ ಹೆಚ್ಚಿಸಲಾಗಿದೆ. ಯಶಸ್ವಿನಿ ಯೋಜನೆಯನ್ನು ಮರು ಅನುಷ್ಠಾನಗೊಳಿಸಿ 300 ಕೋಟಿ ರೂ.ಗಳನ್ನು ಸರ್ಕಾರ ಒದಗಿಸಿದೆ ಎಂದರು. ರೈತರಿಗೆ ಜೀವನ ಜ್ಯೋತಿ ವಿಮೆ ಜ್ಯಾರಿಗೊಳಿಸಿ ಇದಕ್ಕಾಗಿ ರೂ. 180 ಕೋಟಿ ರೂ. ಅನುದಾನ ನೀಡಲಾಗಿದೆ. ಇದರಿಂದ ಯಾವುದೇ ರೈತರು ಅಕಾಲಿಕ ನಿಧನ ಹೊಂದಿದರೆ ಅವರ ಕುಟುಂಬದ ವಾರಸುದಾರರಿಗೆ ರೂ. 2 ಲಕ್ಷ ಹಣವನ್ನು ಪರಿಹಾರ ರೂಪದಲ್ಲಿ ನೀಡಲಾಗುವುದು ಎಂದರು. ಕೆ.ಎಂ.ಎಫ್. ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸರ್ಕಾರ ವಿಶೇಷ ಒತ್ತು ನೀಡುತ್ತಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸ್ವಸಹಾಯ ಗುಂಪುಗಳಿಗೆ ಚೆಕ್ ವಿತರಿಸಿ ಮಾತನಾಡುತ್ತಾ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರ ಇಲಾಖೆ ಮೂಲಕ ಸಹಕಾರಿ ಫಲಾನುಭವಿಗಳಿಗೆ ವಿಶೇಷ ಒತ್ತು ನೀಡುತ್ತಿದ್ದಾರೆ ಎಂದು ತಿಳಿಸಿದರು. ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಸಹಕಾರ ಸಂಸ್ಥೆಗಳು ಮತ್ತು ಇಲಾಖೆಯ ಬಲವರ್ಧನೆಗೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಯಡಿಯೂರಪ್ಪ ಅವರು ಶ್ಲಾಘಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಸಹಕಾರದಿಂದ ಸಮೃದ್ಧಿ' ಪರಿಕಲ್ಪನೆಯಲ್ಲಿ ಸಹಕಾರ ರಂಗದಲ್ಲಿ ಅನೇಕ ಬದಲಾವಣೆಗಳ ಜೊತೆಗೆ ಪ್ರಗತಿ ಕಾಣುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪನೆ ಮಾಡಿದ್ದರ ಹಿನ್ನೆಲೆಯಲ್ಲಿ ದೇಶದಾದ್ಯಂತ ಕೃಷಿ ಪತ್ತಿನ ಸಹಕಾರ

ವ್ಯವಸ್ಥೆಗೆ ಬಲಬಂದಿದೆ. ಪ್ಯಾಕ್ಸ್‌ಗಳ ಗಣಕೀಕರಣ ಕಾರ್ಯಕ್ಕೆ ಒತ್ತು ನೀಡಲಾಗಿದೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡಲಾಗುವ ಬೆಳೆಸಾಲದ ಮೊತ್ತವನ್ನು 5 ಲಕ್ಷ ರೂ. ಗಳಿಗೆ ಏರಿಕೆ ಮಾಡಲಾಗಿದ್ದು, ಸಹಕಾರಿಗಳಿಗೆ ಯಶಸ್ವಿನಿ ಆರೋಗ್ಯ ರಕ್ಷಣೆಯ ಮೂಲಕ ಆರೋಗ್ಯವರ್ಧನೆಗೆ ಮಹತ್ವ ನೀಡಲಾಗಿದೆ. ಅಲ್ಲದೇ ಹೈನುಗಾರರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ರಾಜ್ಯ ಸರ್ಕಾರ ಪ್ರೋತ್ಸಾಹಧನ ನೀಡುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗ ಸೃಷ್ಠಿಯಾಗಿದೆ ಎಂದರು.


ಕಾರ್ಯಕ್ರಮದಲ್ಲಿ ಬೆಂಗಳೂರಿನ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಆವರಣದಲ್ಲಿ ನಿರ್ಮಾಣವಾಗಲಿರುವ ಸಹಕಾರ ಸಮೃದ್ದಿಸೌಧದ ಶಿಲಾನ್ಯಾಸ, ಕೆ.ಎಂ.ಎಫ್.ನ ವಿವಿಧ ಯೋಜನೆಗಳು, ಎಪಿಎಂಸಿ ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಯೋಜನೆಗಳ ಅನುಷ್ಠಾನದಿಂದ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರ ಒತ್ತು ನೀಡುತ್ತಿದೆ ಎಂದು ಸಚಿವ ಎಸ್.ಟಿ. ಸೋಮಶೇಖರ್ ಅವರು ತಿಳಿಸಿದರು.

ವೇದಿಕೆಯ ಮೇಲೆ ಗೃಹ ಸಚಿವ ಅರಗ ಜ್ಞಾನೇಂದ್ರ, ಶಾಸಕರು ಹಾಗೂ



ಕೆ.ಎಂ.ಎಫ್. ಅಧ್ಯಕ್ಷರಾದ ಬಾಲಚಂದ್ರ ಜಾರಕಿಹೊಳಿ, ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಡಿ. ಹನುಮಂತಯ್ಯ ಹಾಗೂ ಜನಪ್ರತಿನಿಧಿಗಳು, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ, ಜಿಲ್ಲಾಧಿಕಾರಿ ಕೆ.ಎ. ದಯಾನಂದ, ಎಪಿಎಂಸಿ ನಿರ್ದೇಶಕ ಎ.ಎಂ. ಯೋಗೀಶ್, ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ಪ್ರಕಾಶ್‌ರಾವ್, ಬಿ.ಸಿ. ಸತೀಶ್, ಕೆ.ಎಂ. ಆಶಾ, ಹಿರಿಯ ಪೊಲೀಸ್ ಅಧಿಕಾರಿಗಳು, ಜಂಟಿ ನಿಬಂಧಕರುಗಳಾದ ಅಶ್ವಥ್‌ನಾರಾಯಣ, ಕಲ್ಲಪ್ಪ ಓಬಣ್ಣಗೋಳ, ಸಿದ್ದಣ್ಣ ಜಯಪ್ರಕಾಶ್ ನೀಲಪ್ಪನವರ ಅವರುಗಳು ಸೇರಿದಂತೆ ಹಿರಿಯ, ಕಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಕೇಂದ್ರ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರುಗಳನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಗೌರವಿಸಿ, ಸನ್ಮಾನಿಸಿದರು.



# ಮಲೆನಾಡು ಜನರ ಆರ್ಥಿಕ ಅಭಿವೃದ್ಧಿಯ ಪ್ರೇರಣ ಶಕ್ತಿ ಪ್ರಗತಿಯಲ್ಲಿ ಶಿವಮೊಗ್ಗದ ಮಲೆನಾಡು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ

ನಮ್ಮ ರಾಜ್ಯದಲ್ಲಿ ಸಹಕಾರ ಚಳವಳಿಯು ಉತ್ತಮವಾದ ಸೇವೆ ನೀಡುವಲ್ಲಿ ಯಶಸ್ಸನ್ನು ಸಾದಿಸಿದೆ. ಇನ್ನು ಪತ್ತಿನ ಸಹಕಾರ ವಲಯವು ಸಹಕಾರ ಚಳುವಳಿಯ ಬಹುಮುಖ್ಯವಾದ ಅಂಗವಾಗಿದ್ದು ವಿಶೇಷತೆಯನ್ನು ಪಡೆದುಕೊಂಡಿದೆ. ಸಹಕಾರದ ನಿಜ ಅರ್ಥದಲ್ಲಿ ಸ್ವಾತಂತ್ರ್ಯ, ಸ್ವಾವಲಂಬಿ, ಸ್ವಾಯತ್ತತೆಯ ಮೂಲಕ ಪತ್ತಿನ ವಲಯ ಉತ್ತಮವಾದ ಸೇವೆಯನ್ನು ಸದಸ್ಯರುಗಳಿಗೆ ನೀಡುವ ಮೂಲಕ ಸದ್ಯರುಗಳ ಆರ್ಥಿಕ ನೆರವು ನೀಡಿ ಅವರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಅನ್ಯರನ್ನು ಅವಲಂಬಿಸದೆ ತಮ್ಮ ಸದಸ್ಯರಿಂದಲೇ ಠೇವಣಿಗಳನ್ನು ಸಂಗ್ರಹಿಸಿ, ಸಾಲ ಸೌಲಭ್ಯ ನೀಡಿ ಆರ್ಥಿಕ ಚೇತರಿಕೆಗೆ ದೊಡ್ಡ ಕೊಡುಗೆ ನೀಡುತ್ತಿವೆ. ಈಗಾಗಲೆ ನಮ್ಮ ರಾಜ್ಯದಲ್ಲಿ ಸುಮಾರು 5000 ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳಲ್ಲಿ ಹಲವು ಉತ್ತಮ ಸಾಧನೆ ಮಾಡುವ ಮೂಲಕ ರಾಜ್ಯದಲ್ಲಿ ಮಾದರಿ ಸಹಕಾರಿ ಸಂಘಗಳಾಗಿ ಗುರುತಿಸಿಕೊಂಡಿವೆ.

ಪತ್ತಿನ ಸಹಕಾರ ಸಂಘಗಳು ಸಾಲ ಸೌಲಭ್ಯದಿಂದ ಸಮಾಜದ ಮಧ್ಯಮ ವರ್ಗದ ಜನರು,ನೌಕರಿ ಮಾಡುವವರು, ಸಣ್ಣಪುಟ್ಟ ಕೈಗಾರಿಕೆ ನಡೆಸುವವರು ಆರ್ಥಿಕವಾಗಿ ಚೈತನ್ಯ ಪಡೆದಿದ್ದಾರೆ. ಹೀಗೆ ಪತ್ತಿನ ವಲಯ ಹಲವು ವರ್ಗದವರಿಗೆ ಆರ್ಥಿಕವಾಗಿ ನೆರವಾಗಲು ನೆರವಾಗುತ್ತಿವೆ ಇಂತಹ ಸಂಘಗಳಲ್ಲಿ ಶಿವಮೊಗ್ಗದ ಮಲೆನಾಡು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಒಂದು. ಈ ಸಹಕಾರ ಸಂಘವು 1993 ರಲ್ಲಿ ಸ್ಥಾಪನೆಯಾಗಿ 2018–19 ನೇ ಸಾಲಿಗೆ ಸಂಘಕ್ಕೆ 25 ವರ್ಷ ತುಂಬಿ ಇದರ ಸವಿ ನೆನಪಿಗಾಗಿ ರಜತ ಮಹೋತ್ಸವವನ್ನು ಆಚರಿಸಿಕೊಂಡಿದೆ. ಈಗ ಸಂಘವು 30ನೇ ವರ್ಷದಲ್ಲಿ ಮುನ್ನಡೆಯುತ್ತಿದೆ.

ಸಂಘವು, ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕು ಹಾಗೂ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕಗಳ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಪ್ರಸ್ತುತ ಸುಮಾರು 6300 ಕ್ಕೂ ಹೆಚ್ಚು ಸದಸ್ಯರನ್ನು ಹಾಗೂ 800ಕ್ಕೂ ಹೆಚ್ಚು ಸಹ ಸದಸ್ಯರನ್ನು ಹೊಂದಿದೆ. ಪ್ರಸಕ್ತ ರೂ. 2.85 ಕೋಟಿ ಷೇರು ಬಂಡವಾಳ, ರೂ. 1.89 ಕೋಟಿ ಆಪದ್ಧನ ನಿಧಿ, ರೂ. 3.07 ಕೋಟಿ ಇತರೆ ನಿಧಿಗಳನ್ನು, ರೂ. 34.16 ಕೋಟಿ ಠೇವಣಿಯನ್ನು ಸಂಗ್ರಹಿಸಿ, ರೂ. 28.84 ಕೋಟಿ ಸಾಲ ನೀಡಿಕೆ ಮಾಡಿ, ಸುಮಾರು 44.42 ಕೋಟಿ ದುಡಿಯುವ ಬಂಡವಾಳದೊಂದಿಗೆ 2021–22ನೇ ಸಾಲಿನಲ್ಲಿ ಸುಮಾರು ರೂ. 100 ಕೋಟಿಗೂ ಹೆಚ್ಚು ವಹಿವಾಟು ನಡೆಸಿ, ರೂ. 86 ಲಕ್ಷ ನಿವ್ವಳ ಲಾಭಗಳಿಸಿ ಮುನ್ನಡೆಯುತ್ತಿದೆ. ಸಹಕಾರಿ ಮುಖಂಡರು, ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರೂ ಆದ




ಕೆ.ಎನ್. ರಾಮಕೃಷ್ಣ ರವರ ಅಧ್ಯಕ್ಷತೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸುತ್ತಿರುವ ಈ ಸಹಕಾರ ಸಂಘವನ್ನು ದಿನಾಂಕ 29–08–1993 ರಲ್ಲಿ ಶ್ರೀ ಎ.ಎಸ್. ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಕೆ.ಎನ್. ರಾಮಕೃಷ್ಣ ರವರ ಉಪಾಧ್ಯಕ್ಷತೆಯಲ್ಲಿ ರೂ. 7.82 ಲಕ್ಷ ಮೂಲ ಬಂಡವಾಳದೊಂದಿಗೆ ಸ್ಥಾಪನೆ ಮಾಡಲಾಯಿತು.

### ಸಂಘಕ್ಕೆ ಸಂದ ಪ್ರಶಸ್ತಿ ಗೌರವಗಳು

- 1996–97ನೇ ಸಾಲಿನಲ್ಲಿ ಈ ಸಂಘದ ಸಧೃಢತೆ ಹಾಗೂ ಅಭಿವೃದ್ಧಿಯನ್ನು ಗಮನಿಸಿ ಆಗಿನ ರಾಜ್ಯ ಸರ್ಕಾರದಿಂದ ರೂ. 1 ಲಕ್ಷ ಅನುದಾನ ಮತ್ತು ಪ್ರಶಂಸೆ
- 2006–07ನೇ ಸಾಲಿನಲ್ಲಿ ಸಹಕಾರ ಇಲಾಖೆ, ಸಹಕಾರ ಯೂನಿಯನ್ನಿನ ಸಹಭಾಗಿತ್ವದಲ್ಲಿ ನಮ್ಮ ಸಂಘಕ್ಕೆ "ಜಿಲ್ಲೆಯ ಉತ್ತಮ ಸಹಕಾರ ಸಂಘ"ವೆಂಬ ಪ್ರಶಂಸೆ
- 2011–12ನೇ ಸಾಲಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ., ಬೆಂಗಳೂರು, ಹಾಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ, ನಮ್ಮ ಸಂಘಕ್ಕೆ "ಅತ್ಯುತ್ತಮ ಸಹಕಾರ ಪತ್ತಿನ ಸಂಘ ಪ್ರಶಸ್ತಿ" ನೀಡಿ ಗೌರವ ಸಲ್ಲಿಕೆ.
- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ, ನವೆಂಬರ್ 2013 ರಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಕೆ.ಎನ್. ರಾಮಕೃಷ್ಣ ರವರಿಗೆ "ಶ್ರೇಷ್ಠ ಸಹಕಾರಿ ಪ್ರಶಸ್ತಿ" ನೀಡಿ ಗೌರವ ಸಲ್ಲಿಕೆ.
- 1997–98 ರಲ್ಲಿ ಸಿ.ಐ.ಟಿ.ಬಿ ಯಿಂದ ಸಂಘಕ್ಕೆ 100 X 100

ಅಳತೆಯ ನಿವೇಶನ.ಮಂಜೂರಾತಿ

- ದಿನಾಂಕ : 06/12/98ರಲ್ಲಿ ಎಂ.ಸಿ ನಾಣಯ್ಯ ನವರಿಂದ ಕಟ್ಟಡದ ಶಂಕು ಸ್ಥಾಪನೆ
- 2000–01ನೇ ಸಾಲಿನಿಂದ ಸಂಘದ ಸದಸ್ಯರಿಗೆ "ಸದಸ್ಯರ ಮರಣೋತ್ತರ ನಿಧಿ" ಯೋಜನೆ ಜಾರಿ.
- 2000–01ನೇ ಸಾಲಿನಿಂದ ಪ್ರತಿವರ್ಷ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲೆ, ಕ್ರೀಡೆ, ಸಾಂಸ್ಕೃತಿಕ, ಕೃಷಿ ಇನ್ನಿತರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸದಸ್ಯರು & ಅವರ ಮಕ್ಕಳಿಗೆ ಸಾಧಕರಿಗೆ ಪ್ರೋತ್ಸಾಹ ಕಾರ್ಯಕ್ರಮ
- ಸಂಘದ ಎಲ್ಲಾ ವ್ಯವಹಾರವನ್ನು ಗಣೀಕರಣಗೊಳಿಸಿ ಸದಸ್ಯರಿಗೆ ಎಸ್‌ಎಂಎಸ್ ಸೌಲಭ್ಯ ಕಲ್ಪಿಸಲಾಗಿದೆ.
- 2003–04ರಲ್ಲಿ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಪೂಜ್ಯ ಗುರುಗಳಾದ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಹಾಗೂ ಮಾಜಿ ಸಚಿವರಾದ ಹೆಚ್. ವಿಶ್ವನಾಥ್‌ರವರು ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಾದ ಸನ್ಮಾನ್ಯ ಎಂ.ಸಿ. ನಾಣಯ್ಯ ರವರ ಉಪಸ್ಥಿತಿಯಲ್ಲಿ "ದಶಮಾನೋತ್ಸವ" ಆಚರಣೆ.
- 2003–04ನೇ ಸಾಲಿನಲ್ಲಿ ಸುಮಾರು ರೂ. 0.51 ಕೋಟಿ ವೆಚ್ಚದಲ್ಲಿ 82 ಚದರದ ಸ್ವಂತ ಕಟ್ಟಡ ನಿರ್ಮಾಣ,
- 2005–06 ರಿಂದ ಸದಸ್ಯತ್ವವನ್ನು ಸಾರ್ವಜನಿಕರ ಅನುಕೂಲಕ್ಕಾಗಿ 'ಬಿ' ತರಗತಿಗೆ ವಿಸ್ತರಣೆ
- 2006–07ನೇ ಸಾಲಿನಿಂದ ಪ್ರತಿ ವರ್ಷವೂ ಸಂಘವನ್ನು ಆಡಿಟ್ ವರ್ಗೀಕರಣದಲ್ಲಿ "ಎ" ವರ್ಗದ ಸಂಘವೆಂದು ಪರಿಗಣನೆ
- 2011–12ನೇ ಸಾಲಿನಿಂದ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಇ–ಸ್ಟಾಂಪಿಂಗ್ ಸೌಲಭ್ಯ ಜಾರಿ
- ದಿನಾಂಕ : 01–09–2013 ರಂದು ಹೆಚ್.ಡಿ. ಕುಮಾರ ಸ್ವಾಮಿಯವರು, ಮಧು ಬಂಗಾರಪ್ಪ ರವರು ಹಾಗೂ ಇನ್ನಿತರೆ ಗಣ್ಯರ ಸಮ್ಮುಖದಲ್ಲಿ ತೀರ್ಥಹಳ್ಳಿಯಲ್ಲಿ ಸಂಘದ ಶಾಖೆ ಪ್ರಾರಂಭ
- 2018–19ನೇ ಸಾಲಿನಲ್ಲಿ ಸಂಘಕ್ಕೆ 25 ವರ್ಷ ತುಂಬಿದ ಸವಿ ನೆನಪಿಗಾಗಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಜಗದ್ಗುರು ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ, ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ. ದೇವೇಗೌಡರವರು, ಅಂದಿನ ಸಹಕಾರ ಸಚಿವರಾದ ಬಂಡೆಪ್ಪ ಕಾಶಂಪೂರ ರವರು, ಅಂದಿನ ಜಿಲ್ಲಾ ಮಂತ್ರಿಗಳಾದ ಡಿ.ಸಿ. ತಮ್ಮಣ್ಣನವರು ಮತ್ತು ಮುಂತಾದ ಗಣ್ಯರ ಸಮಕ್ಷಮದಲ್ಲಿ "ರಜತಮಹೋತ್ಸವ" ಕಾರ್ಯಕ್ರಮ ನಡೆಸಿ, "ಬೆಳ್ಳಿ ಬಟ್ಟಲು" ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.
- ಸಂಘವು ಪ್ರಾರಂಭದಿಂದ ಇಲ್ಲಿಯವರೆಗೂ ಲಾಭದಲ್ಲಿಯೇ ಮುಂದುವರಿಯುತ್ತಿದ್ದು, ಸದಸ್ಯರಿಗೆ ಪ್ರತಿ ವರ್ಷವೂ ಲಾಭಾಂಶವನ್ನು ವಿತರಿಸುತ್ತಾ ಬರಲಾಗುತ್ತಿದೆ.
- ಯಾವುದೇ ಬ್ಯಾಂಕ್ ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯದೆ ತನ್ನ ಬಂಡವಾಳದಿಂದಲೇ ವ್ಯವಹರಿಸುತ್ತಾ ಸದೃಢವಾಗಿ ಕಾರ್ಯನಿರ್ವಹಿಸಿಕೊಂಡು ಬರಲಾಗುತ್ತಿದೆ.

**ಸದಸ್ಯರುಗಳಿಗೆ ನೀಡಲಾಗುತ್ತಿರುವ ವಿವಿಧ ರೀತಿಯ ಸಾಲ ಸೌಲಭ್ಯಗಳು :**

ಜಾಮೀನು ಸಾಲ, ದ್ವಿಚಕ್ರ ವಾಹನ ಸಾಲ, ತ್ರಿಚಕ್ರ ವಾಹನ ಸಾಲ, ನಾಲ್ಕು ಚಕ್ರವಾಹನ ಸಾಲ, ನಾಲ್ಕು ಚಕ್ರ ಹಳೆ ವಾಹನ ಸಾಲ, ಬಸ್ಸು & ಲಾರಿಗಳಿಗೆ ಸಾಲ, 6 ಚಕ್ರ ಹಳೆವಾಹನ ಸಾಲ, ಗೃಹಖರೀದಿ/ನಿರ್ಮಾಣ ಸಾಲ, ಸ್ಥಿರಾಸ್ತಿ ಆಧಾರ ಸಾಲ, ವಾಸದ ಮನೆ ವಿಸ್ತರಣೆಸಾಲ, ನಿವೇಶನ ಖರೀದಿ ಸಾಲ, ವಾಣಿಜ್ಯ ಸಂಕೀರ್ಣನಿರ್ಮಾಣ/ಖರೀದಿ ಸಾಲ, ಅಪಾರ್ಟ್‌ಮೆಂಟ್‌ನಲ್ಲಿ ಗೃಹಖರೀದಿ ಸಾಲ, ಅಪಾರ್ಟ್‌ಮೆಂಟ್‌ನಲ್ಲಿ ಗೃಹನಿರ್ಮಾಣಸಾಲ, ಠೇವಣಿ ಮೀರೆಳೆತ ಸಾಲ, ವೇತನ ಆಧಾರ ಸಾಲ, ಬಂಗಾರ ಆಭರಣ ಸಾಲ, ಎನ್.ಎಸ್.ಸಿ ಆಧಾರ ಸಾಲ, ಪಿಗ್ಮಿ ಆಧಾರ ವಿಶೇಷ ಸಾಲ, ಓ.ಡಿ. ಸಾಲ

**ಐದು ವರ್ಷಗಳ ಪ್ರಗತಿಯ ಪಕ್ಷಿನೋಟ (ರೂ. ಕೋಟಿಗಳಲ್ಲಿ)**

| ಕ್ರ.ಸಂ. | ವಿವರ | 2018–19 | 2019–20 | 2020–21 | 2021–22 | 31.12.22 |
|---|---|---|---|---|---|---|
| 1 | ಸದಸ್ಯತ್ವ | 5817 | 5935 | 6104 | 6213 | 6286 |
| 2 | ಷೇರು ಬಂಡವಾಳ | 2.20 | 2.40 | 2.61 | 2.71 | 2.85 |
| 3 | ಆಪದ್ದನ ನಿಧಿ | 1.13 | 1.30 | 1.48 | 1.68 | 1.89 |
| 4 | ಸದಸ್ಯರಿಂದ ಠೇವಣಿಗಳು | 21.70 | 24.90 | 27.73 | 31.96 | 34.16 |
| 5 | ಸಾಲ ನೀಡಿಕೆ | 20.02 | 23.19 | 25.68 | 25.71 | 28.84 |
| 6 | ಹೂಡಿಕೆಗಳು | 7.92 | 9.45 | 11.57 | 15.39 | 13.00 |
| 7 | ನಿವ್ವಳ ಲಾಭ | 0.65 | 0.70 | 0.81 | 0.83 | 0.58 |
| 8 | ದುಡಿಯುವ ಬಂಡವಾಳ | 27.00 | 31.50 | 35.46 | 40.33 | 44.42 |
| 9 | ಒಟ್ಟು ವ್ಯವಹಾರ | 79.25 | 89.21 | 97.00 | 93.00 | 99.86 |

# ಸಹಕಾರದಿಂದ ಸರ್ವಾಂಗೀಣ ಅಭ್ಯುದಯ - ಕೆ.ಎನ್. ರಾಮಕೃಷ್ಣ



ಸಹಕಾರ ಕ್ಷೇತ್ರದ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಆರ್ಥಿಕ ಸ್ವಾವಲಂಬನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಸಾಧ್ಯವಿದೆ. ಇಂತಹ ವ್ಯವಸ್ಥೆಯ ಮೂಲಕ ಸರ್ವಾಂಗೀಣ ಅಭ್ಯುದಯ ಸಾಧಿಸಲು ನಾವು ಮುಂದಾಗಬಹುದು. ಪ್ರಾಮಾಣಿಕವಾಗಿ, ನಿಷ್ಪಕ್ಷಪಾತವಾಗಿ ಆಡಳಿತ ಮಂಡಳಿ ಸದಸ್ಯರು ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಉತ್ತಮವಾದ ಮಾರ್ಗದರ್ಶನ ಮಾಡಿದರೆ, ಸಹಕಾರ ವಲಯ ಇನ್ನಷ್ಟು ಬಲಗೊಳ್ಳುತ್ತದೆ. ಇಲ್ಲಿ ಸದಸ್ಯರುಗಳೇ ಮಾಲೀಕರಾಗಿದ್ದು, ಅವರ ಕ್ರಿಯಾತ್ಮಕ ಭಾಗವಹಿಸುವಿಕೆ ಅಗತ್ಯವಿದೆ ಎಂಬುದಾಗಿ ಅಧ್ಯಕ್ಷರಾದ ಕೆ.ಎನ್. ರಾಮಕೃಷ್ಣಯ್ಯ ಅವರ ಅಭಿಪ್ರಾಯವಾಗಿದೆ.

ಇನ್ನು ಈ ಸಂಸ್ಥೆಯನ್ನು ಆರ್ಥಿಕವಾಗಿ ಅಬಲರಾಗಿರುವ ಬೀದಿಬದಿ ವ್ಯಾಪಾರಿಗಳು, ಕೂಲಿಕಾರ್ಮಿಕರುಗಳ ಅಭಿವೃದ್ಧಿಗಾಗಿ 1993 ರಲ್ಲಿ ಸ್ಥಾಪಿಸಲಾಗಿದ್ದು, ನಾನು ಸಹ ಸಂಸ್ಥಾಪಕ ಉಪಾಧ್ಯಕ್ಷನಾಗಿ, ನಂತರ 2001 ರಿಂದ ಅಧ್ಯಕ್ಷನಾಗಿ ಈ ಸಂಸ್ಥೆಯ ಬೆಳವಣಿಗೆಗೆ ಮಾರ್ಗದರ್ಶನ ಮಾಡುತ್ತಿದ್ದೇನೆ. ಸಂಸ್ಥೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದು ಆಡಳಿತ ಮಂಡಳಿಯ ಆಶಯವಾಗಿದೆ ಎಂದು ಅವರು ಸಹಕಾರ ವಾರಪತ್ರಿಕೆಯೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡರು.

## ಆಡಳಿತ ಮಂಡಳಿ



ಕೆ.ಎನ್. ರಾಮಕೃಷ್ಣ
ಅಧ್ಯಕ್ಷರು



ಜೆ.ಎಲ್. ಪದ್ಮನಾಭ್
ಉಪಾಧ್ಯಕ್ಷರು



ಕೆ.ಎಂ. ಗೋಪಾಲಗೌಡರು
ಖಜಾಂಚಿ



ಗುರುಶಾಂತಪ್ಪ
ನಿರ್ದೇಶಕರು



ಕೆ.ಪಿ. ಪುಟ್ಟಸ್ವಾಮಿ
ನಿರ್ದೇಶಕರು



ಎನ್.ಜಿ. ವೆಂಕಟೇಶ್
ನಿರ್ದೇಶಕರು



ಎನ್.ಟಿ. ಸತೀಶ್
ನಿರ್ದೇಶಕರು



ಕೆ.ಎಸ್. ನಾಗೇಶ್
ನಿರ್ದೇಶಕರು



ಜಿ.ಆರ್. ನಾಗೇಶ್
ನಿರ್ದೇಶಕರು



ಹೆಚ್.ಜಿ. ಕೃಷ್ಣಮೂರ್ತಿ
ನಿರ್ದೇಶಕರು



ಎನ್. ದಿನೇಶ್
ನಿರ್ದೇಶಕರು



ಎನ್.ಕೆ. ರಾಜೇಂದ್ರ
ನಿರ್ದೇಶಕರು



ಎ.ಸಿ. ಬಸಪ್ಪ
ನಿರ್ದೇಶಕರು



ಎನ್.ಎಂ. ಗೀತಾ
ನಿರ್ದೇಶಕರು



ಎನ್. ಶ್ರೀಕಂಠಮೂರ್ತಿ
ನಿರ್ದೇಶಕರು



ಬಿ.ಆರ್. ಉಮೇಶ್
ನಿರ್ದೇಶಕರು



ಎಂ.ಜಿ. ಆಶಾ
ನಿರ್ದೇಶಕರು



ಪಿ. ಹಿರಿಯಣ್ಣ
ವ್ಯ॥ ನಿರ್ದೇಶಕರು



# ಶಾಂತಿ, ನ್ಯಾಯ ಮತ್ತು ಬಲಶಾಲಿ ಸಹಕಾರಿ ಸಂಸ್ಥೆಗಳು

ಡಾ. ಯಶವಂತ ಡೋಂಗ್ರೆ, ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ

ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಎಲ್ಲರನ್ನೊಳಗೊಂಡ ಸಮಾಜದ ನಿರ್ಮಾಣವನ್ನು ಉತ್ತೇಜಿಸಿರಿ, ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಿರಿ ಮತ್ತು ಎಲ್ಲ ಹಂತಗಳಲ್ಲೂ ಪರಿಣಾಮಕಾರಿಯಾದ, ಉತ್ತರದಾಯಿತ್ವವುಳ್ಳ ಮತ್ತು ಎಲ್ಲರನ್ನೂ ಒಳಗೊಂಡ ಸಂಸ್ಥೆಗಳನ್ನು ನಿರ್ಮಿಸಿರಿ ಎಂದು ಈ ಗುರಿಯಲ್ಲಿ ನಿರ್ದೇಶಿಸಲಾಗಿದೆ (Promote peaceful and inclusive societies for sustainable development, provide access to justice for all and build effective, accountable and inclusive institutions at all levels). ಖ್ಯಾತ ಆರ್ಥಿಕ ತಜ್ಞರಾದ ಅಮಾರ್ತ್ಯ ಸೇನ್‌ರವರು 'ಅಭಿವೃದ್ಧಿ ಎಂದರೆ ಶಾಂತಿ ಮತ್ತು ಅಭಿವೃದ್ಧಿ ಎಂದರೆ ಸ್ವಾತಂತ್ರ' ಎಂದು ವ್ಯಾಖ್ಯಾನಿಸಿದ್ದಾರೆ. ಸುಸ್ಥಿರ ಅಭಿವೃದ್ಧಿಯ ಬಗೆಗಿನ ಹದಿನಾರನೆಯ ಗುರಿಯು ಇದೇ ಅಂಶಗಳಮೇಲೆ ಒತ್ತು ನೀಡಿದೆ. ಜಗತ್ತಿನಾದ್ಯಂತ ಒಂದೆಡೆ ಆಧುನೀಕರಣ, ತಂತ್ರಜ್ಞಾನದಲ್ಲಿ ಹೊಸ ಹೊಸ ಅನ್ವೇಶಣೆಗಳು, ಆರ್ಥಿಕ ಬೆಳವಣಿಗೆ ಇವೆಲ್ಲ ನಡೆಯುತ್ತಿದೆಯಾದರೂ, ಇನ್ನೊಂದೆಡೆ ರಾಜಕೀಯ ಮತ್ತು ಧಾರ್ಮಿಕ ನೆಲೆಯಲ್ಲಿ ಯುದ್ಧಗಳು ಮತ್ತು ಹಿಂಸೆ, ಅಸಮಾನತೆ, ಮಾನವ ಹಕ್ಕುಗಳ ಉಲ್ಲಂಘನೆ ಇವೆಲ್ಲ ಘಟಿಸುತ್ತಿರುವದನ್ನೂ ಕಾಣುತ್ತಿದ್ದೇವೆ. ಆದುದರಿಂದ ನಿಜವಾದ ಅಭಿವೃದ್ಧಿ ಸಾಧ್ಯವಾಗಬೇಕಾದರೆ ಶಾಂತಿ ನೆಲೆಸಬೇಕು, ಎಲ್ಲರಿಗೂ ನ್ಯಾಯ ಸಿಗಬೇಕು ಮತ್ತು ಸಮಾಜಗಳು ಎಲ್ಲರನ್ನೂ ಒಳಗೊಂಡ ಸಮೂಹವಾಗಬೇಕೆಂದು ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ತಿಳಿಸಲಾಗಿದೆ.

ಹಿಂಸೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ವಿವಿಧ ಕಾರಣಗಳ ಆಧಾರದಲ್ಲಿ ಸುಸ್ಥಿರ ಅಭಿವೃದ್ಧಿಯ ಈ ಗುರಿಯು 2030ರೊಳಗೆ ಸಾಧಿಸಬೇಕಾದ ಕೆಲವು ಮುಖ್ಯ ಮೈಲಿಗಲ್ಲುಗಳನ್ನು ಈ ಕೆಳಗಿನಂತೆ ಹೆಸರಿಸಿದೆ.

- ಎಲ್ಲ ಬಗೆಯ ಹಿಂಸೆ ಮತ್ತು ಅದರಿಂದಾಗುವ ಸಾವಿನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬೇಕು.
- ಮಕ್ಕಳ ಬಗೆಗಿನ ದುರ್ನಡತೆ, ಶೋಷಣೆ, ಮಕ್ಕಳ ಕಾನೂನುಬಾಹಿರ ಕಳ್ಳಸಾಗಣೆ ಮುಂತಾದುವುಗಳೂ ಸೇರಿದಂತೆ ಮಕ್ಕಳ ಮೇಲಿನ ಎಲ್ಲ ರೀತಿಯ ಹಿಂಸೆ ಮತ್ತು ದೌರ್ಜನ್ಯವನ್ನು ಕೊನೆಗೊಳಿಸಬೇಕು.
- ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಸಮಾನವಾಗಿ ನ್ಯಾಯ ಪ್ರಕ್ರಿಯೆ ದೊರೆಯುವಂತೆ ಎಲ್ಲೆಡೆ ಕಾನೂನಾತ್ಮಕ ಆಡಳಿತವನ್ನು ಸಾಧ್ಯವಾಗಿಸಬೇಕು
- ಕಾನೂನು ಬಾಹಿರ ನೆಲೆಯಲ್ಲಿ ನಡೆಯುತ್ತಿರುವ ಹಣಕಾಸಿನ ಮತ್ತು ಶಸ್ತ್ರಾಸ್ತ್ರಗಳ ಹರಿವನ್ನು ಮತ್ತು ಸಾಂಸ್ಥಿಕೃತ ಅಪರಾಧಗಳನ್ನು ಗಣನೀಯವಾಗಿ ಕಡಿಮೆ ಮಾಡಬೇಕು
- ಎಲ್ಲ ರೀತಿಯ ಭ್ರಷ್ಟಾಚಾರ ಮತ್ತು ಲಂಚಗುಳಿತನವನ್ನು ನಿರ್ಮೂಲನೆ ಮಾಡಬೇಕು
- ಎಲ್ಲ ಸಾಂಸ್ಥಿಕ ರಚನೆಗಳೂ ಪರಿಣಾಮಕಾರಿಯಾಗಿ, ಉತ್ತರದಾಯಿತ್ವ ಹೊಂದಿ ಪಾರದರ್ಶಕ ನೆಲೆಯಲ್ಲಿ ಕೆಲಸ ನಿರ್ವಹಿಸುವಂತೆ ಮಾಡಬೇಕು
- ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಭಾಗವಹಿಸುವಿಕೆಯನ್ನು ವಿಸ್ತುತ ಗೊಳಿಸಬೇಕು ಮತ್ತು ಸಶಕ್ತಗೊಳಿಸಬೇಕು.
- ಎಲ್ಲ ದೇಶಗಳಲ್ಲೂ ಪ್ರಜೆಗಳಿಗೆ ಮಾಹಿತಿ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ ದತ್ತವಾಗುವಂತೆ ಮಾಡಬೇಕು.
- ಹಿಂಸೆ, ಭಯೋತ್ಪಾದನೆ ಮತ್ತು ಅಪರಾಧಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು.
- ಜಗತ್ತಿನೆಲ್ಲೆಡೆ ಸುಸ್ಥಿರ ಅಭಿವೃದ್ಧಿಗಾಗಿ ತಾರತಮ್ಯ ರಹಿತವಾದ ನೀತಿಗಳು ಮತ್ತು ಕಾನೂನುಗಳನ್ನು ಜಾರಿಗೆ ತರಬೇಕು.

ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಒತ್ತು ನೀಡಿರುವ ಮೇಲಿನ ಅಂಶಗಳನ್ನು ಗಮನಿಸಿದಾಗ ಜಗತ್ತಿನ ವಿವಿಧ ಭಾಗಗಳಲ್ಲಿ ಶಾಂತಿ ಸ್ಥಾಪನೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಬೇಕಾದ ತುರ್ತು ಅಗತ್ಯ ಗಮನಕ್ಕೆ ಬರುತ್ತದೆ. ಸಹಜವಾಗಿಯೇ ಇಂತಹ ವಾತಾವರಣದ ನಿರ್ಮಾಣವು ಸಾಧ್ಯವಾಗಬೇಕಾದರೆ ಸಮುದಾಯಗಳು ಒಟ್ಟಾಗಿ ಮತ್ತು ಪರಸ್ಪರ ಕೊಡುಕೊಳ್ಳುವಿಕೆಯಿಂದ ಇರಬೇಕಾಗುತ್ತದೆ. ಇಂತಹ ಕೊಡುಕೊಳ್ಳುವಿಕೆಯು ಸಾಧ್ಯವಾಗಬೇಕಾದರೆ ಸಮುದಾಯವು ಒಟ್ಟಾಗಿ ಪರಸ್ಪರರ ಸಹಾಯಕ್ಕಾಗಿ ನಿರ್ಮಾಣಮಾಡಿಕೊಳ್ಳುವ ಸಾಂಸ್ಥಿಕ ರಚನೆಗಳ ಅಗತ್ಯವಿದೆ. ಅಂತೆಯೇ ಸಹಕಾರಿ ಸಂಸ್ಥೆಗಳ ಕಡೆಗೆ ಎಲ್ಲರ ಗಮನ ಹರಿಯುತ್ತಿದೆ. ಸಹಕಾರಿ ಸಂಸ್ಥೆಗಳು ಸಮುದಾಯ ಕಾಳಜಿಯನ್ನು ಒಂದು ಪ್ರಮುಖ ತತ್ವವಾಗಿ ಹೊಂದಿರುವ ಮತ್ತು ಸದಸ್ಯ ಸಮುದಾಯದ ಸಂಘಟಿತ ಸಂರಚನೆಯಾಗಿರುವುದರಿಂದ ಎಲ್ಲರ ಏಳಿಗೆ ಮತ್ತು ಎಲ್ಲರಿಗೂ ನ್ಯಾಯ ದೊರೆಯುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತವೆ.

ಶಾಂತಿ, ಸೌಹಾರ್ದತೆ ಮತ್ತು ನ್ಯಾಯುತ ವಾತಾವರಣ ನಿರ್ಮಾಣವಾಗಬೇಕಾದರೆ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ದೊರಕಿಸಿಕೊಡುವುದು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು 2009ರಲ್ಲಿ ಠರಾವೊಂದನ್ನು ಸರ್ವಾನುಮತದಿಂದ ಒಪ್ಪಿಕೊಂಡು, ಸಹಕಾರಿ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿನ ಜನಸಮುದಾಯಕ್ಕೆ ಆರ್ಥಿಕ ಭದ್ರತೆ ಒದಗಿಸುವ, ಶಾಂತಿ ಸೌಹಾರ್ದತೆಯ ಸ್ಥಾಪನೆಗೆ ಅನುವಾಗುವ, ಯಾವುದೇ ಬಗೆಯ ಹಿಂಸೆ ನಡೆಯದಂತೆ ಮಾಡುವ ಮತ್ತು ವಿಶೇಷವಾಗಿ ಸದಸ್ಯ ಸಮುದಾಯವು ಸಂತೃಪ್ತಿ ಮತ್ತು ಸುರಕ್ಷಿತವಾಗಿರುವಂತೆ ಮಾಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿದೆ.

**ಸಹಕಾರಿ ಸಂಸ್ಥೆಗಳ ಪಾತ್ರ :** ಜಗತ್ತಿನಾದ್ಯಂತ ಹಲವಾರು ಸಹಕಾರ ಸಂಘಟನೆಗಳು ಈಗಾಗಲೇ ಸುಸ್ಥಿರ ಅಭಿವೃದ್ಧಿಯ ಬಗೆಗಿನ ಈ ಗುರಿಗೆ ಪೂರಕವಾದ ಚಟುವಟಿಕೆಗಳಲ್ಲಿ ನಿರತವಾಗಿರುವುದನ್ನು ಕಾಣಬಹುದಾಗಿದೆ. ಆಫ್ರಿಕಾದ ರಾಂಡ ದೇಶದಲ್ಲಿ ಹದಿನಾರು ಜನ ಮಹಿಳೆಯರು ಸೇರಿ

ಆರಂಭಿಸಿದ ಬುರಂಗ ಸಹಕಾರಿ ಸಂಘವು ಈ ದಿಸೆಯಲ್ಲಿ ಒಂದು ಉತ್ತಮ ಉದಾಹರಣೆ. ರಾಂಡ ದೇಶದಲ್ಲಿ ಆಂತರಿಕ ಸಮುದಾಯ ಕಲಹದಿಂದಾಗಿ 1994ರಲ್ಲಿ ಸುಮಾರು ಹತ್ತು ಲಕ್ಷ ಜನ ಕೊಲ್ಲಲ್ಪಟ್ಟರು. ಹೊಡೆದಾಟದಲ್ಲಿ ತೊಡಗಿದ ಎರಡೂ ಸಮುದಾಯದ ಜನ ಕಷ್ಟ ಸಂಕಷ್ಟಗಳಿಗೆ ಒಳಗಾದರು. ಸ್ನೇಹಿತರು, ಒಂದೇ ಕುಟುಂಬದವರು ಸಹ ಪರಸ್ಪರ ಹೊಡೆದಾಡಿ ಸಾಯುವಂಥ ಭೀಕರ ಪರಿಸ್ಥಿತಿ ಅಲ್ಲಿ ನೆಲೆಸಿತ್ತು. ಇಂತಹ ಸಂದರ್ಭದಲ್ಲಿ ಹೊಡೆದಾಡುತ್ತಿದ್ದ ಎರಡೂ ಸಮುದಾಯದ ಸದಸ್ಯರನ್ನೇ ಸೇರಿಸಿ ಆರಂಭಿಸಿದ ಈ ಸಹಕಾರಿ ಸಂಘವು ಕಲೆ ಮತ್ತು ಕುಶಲ ಸಾಮಗ್ರಿಗಳ ಮೂಲಕ ಹಲವು ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸುವುದರ ಜೊತೆಗೆ, ಎರಡೂ ಸಮುದಾಯದ ಜನಗಳ ನಡುವೆ ಮಾತುಕತೆಗಳು ನಡೆದು, ಸೌಹಾರ್ದಯುತ ವಾತಾವರಣ ನಿರ್ಮಾಣವಾಗಿ ತಮ್ಮ ಪರಿಸರದಲ್ಲಿ ಸಾಮಾಜಿಕ ಭದ್ರತೆ ನೆಲೆಸುವಂತೆ ಮಾಡುವಲ್ಲಿಯೂ ಉತ್ತಮ ಸೇವೆ ಸಲ್ಲಿಸಿದೆ.

ಯೂರೋಪ್‌ನ ಬೋಸ್ನಿಯದಲ್ಲಿ ಇಟಲಿಯ ಸಹಕಾರಿ ಸಂಘಟನೆಯ ಸಹಾಯದಿಂದ ಆರಂಭಿಸಿದ ಬಹು ಜನಾಂಗೀಯ ಕೃಷಿ ಸಹಕಾರಿ ಸಂಘವೂ ಇಂತಹುದೇ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ತೊಂಭತ್ತರ ದಶಕದ ಆರಂಭದಲ್ಲಿ ಬೋಸ್ನಿಯ ಮತ್ತು ಯುಗೋಸ್ಲೋವಿಯಾ ದೇಶಗಳ ನಡುವೆ ನಡೆದ ಜನಾಂಗೀಯ ಆಂದೋಲನದಲ್ಲಿ ಹಿಂಸಾಚಾರ ನಡೆದು, ಸಮುದಾಯಗಳ ನಡುವೆ ವೈಮನಸ್ಯ ಹೆಚ್ಚಾಗಿ ಸಾಮಾಜಿಕ ಅಶಾಂತಿ ನೆಲೆಸಿದ್ದ ಸಂದರ್ಭದಲ್ಲಿ, ಈ ಸಹಕಾರಿ ಸಂಘವು ಸಾಮೂಹಿಕ ನೆಲೆಯಲ್ಲಿ ಕೃಷಿ ಚಟುವಟಿಕೆಗಳನ್ನು ಸಂಘಟಿಸುತ್ತಾ ಸ್ಥಳೀಯ ಸಮುದಾಯಗಳಿಗೆ ಆರ್ಥಿಕ ಆಸರೆ ನೀಡಿದುದರ ಜೊತೆಗೆ, ಕಲಹದಲ್ಲಿ ನಿರತರಾಗಿದ್ದ ವಿವಿಧ ಜನಾಂಗದ ಜನರನ್ನೇ ಒಟ್ಟು ಸೇರಿಸಿ, ಅವರುಗಳು ಒಟ್ಟಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗುವಂತೆ ಹಾಗೂ ಈ ಪ್ರಕ್ರಿಯೆಯ ಜೊತೆಗೇ ಪರಸ್ಪರ ಮಾತುಕತೆಯ ಮೂಲಕ ತಮ್ಮ ಅನುಮಾನಗಳು ಮತ್ತು ಅಪನಂಬಿಕೆಗಳನ್ನು ತೊಡೆದು ಸೌಹಾರ್ದಯುತವಾಗಿ ಬಾಳುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಇದೇರೀತಿ ಆಂತರಿಕ ಕಲಹ ಮತ್ತು ಸಮುದಾಯಗಳ ನಡುವಿನ ಹಿಂಸಾಚಾರಗಳು ನಡೆಯುತ್ತಿರುವ ಗ್ವಾಟೆಮಾಲ ಮತ್ತು ಸಿರಿಯಾ ದೇಶಗಳಲ್ಲಿ ಕೂಡ ಸಹಕಾರಿ ಸಂಘಟನೆಗಳು ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಜನಾಂಗೀಯ ಕಲಹದಿಂದಾಗಿ ಪರಸ್ಪರ ನಂಬಿಕೆ ಕಳೆದುಕೊಂಡ ಸಮುದಾಯದ ಪ್ರತಿನಿಧಿಗಳನ್ನು ಒಟ್ಟು ಸೇರಿಸಿ, ಪರಸ್ಪರ ಸಹಯೋಗದಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವಂತೆ ಮಾಡುತ್ತಾ ಪರೋಕ್ಷವಾಗಿ ಶಾಂತಿ ಮತ್ತು ನ್ಯಾಯಯುತ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ.

ಹೀಗೆಯೇ ಮಾನವ ಕಳ್ಳಸಾಗಾಣಿಕೆಗೆ ಸಿಲುಕಿ ಯಾವುದೋ ದೇಶದಲ್ಲಿ ಅನಾಥವಾಗಿ, ಅನಧಿಕೃತವಾಗಿ ಇರಬೇಕಾಗಿ ಬಂದವರು, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ನಿರಾಶ್ರಿತರಾಗಿ ಹೋದವರು ಮುಂತಾದವರಿಗೂ ಕೂಡ ಸಹಕಾರಿ ಸಂಸ್ಥೆಗಳು ಸಹಾಯ ಮಾಡುತ್ತಿರುವುದನ್ನು ಕಾಣಬಹುದು. ಇತ್ತೀಚಿನ ಒಂದು ಉದಾಹರಣೆ ಎಂದರೆ ಬರ್ಮಾ ದೇಶದಿಂದ ಬಾಂಗ್ಲಾದೇಶಕ್ಕೆ ನಿರಾಶ್ರಿತವಾಗಿ ಬಂದಿರುವ ರೊಹಿಂಗ್ಯಾ ಸಮುದಾದಯದ ಜನರಿಗೆ ಭದ್ರತೆ ಒದಗಿಸುವ ನೆಲೆಯಲ್ಲಿ ರೊಹಿಂಗ್ಯಾ ಮಹಿಳೆಯರನ್ನು ಸೇರಿಸಿ ಒಂದು ಉತ್ಪಾದಕ ಸಹಕಾರಿ ಸಂಘವನ್ನು ಸ್ಥಾಪಿಸಲಾಗಿದ್ದು, ಈ ಸಹಕಾರಿ ಸಂಘವು ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ, ಅವರಿಂದ ಸಿದ್ಧ ಉಡುಪುಗಳನ್ನು ತಯಾರಿಸಿ ಮಾರುತ್ತಾ, ಈ ನಿರಾಶ್ರಿತರು ಕೇವಲ ಸರಕಾರ ನೀಡುವ ಅನ್ನಾಹಾರವನ್ನೇ ಅವಲಂಬಿಸುವ ಬದಲಿಗೆ, ತಾವೇ ದುಡಿಯುತ್ತ, ಸ್ವಾವಲಂಬಿಗಳಾಗಿ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಪಡೆಯಲು ಕಾರಣವಾಗಿದೆ.

ಮೇಲೆ ತಿಳಿಸಿದ ಎಲ್ಲ ಗುರಿಗಳು ಮತ್ತು ಜಾಗತಿಕ ನೆಲೆಯಲ್ಲಿ ಹಲವು ಸಹಕಾರಿ ಸಂಘಗಳ ಚಟುವಟಿಕೆಗಳ ಆಧಾರದಲ್ಲಿ, ನಮ್ಮ ಸಹಕಾರಿ ಸಂಘಗಳು ಗಮನಿಸಬೇಕಾದ ಕೆಲವು ಅಂಶಗಳು ಮತ್ತು ಕೈಗೆತ್ತಿಕೊಳ್ಳಬಹುದಾದ ಚಟುವಟಿಕೆಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

- ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯು ಶಾಂತಿಯುತ ಮತ್ತು ನ್ಯಾಯಯುತ ಸಮಾಜದ ಬುನಾದಿ ಎಂಬುದನ್ನು ಅರಿಯಬೇಕು.
- ಸಹಕಾರಿ ಸಂಘಗಳು ತಮ್ಮ ಭೌಗೋಳಿಕ ಮತ್ತು ಕಾರ್ಯವ್ಯಾಪ್ತಿಯ ನೆಲೆಯಲ್ಲಿ ಸದಸ್ಯ ಸಮುದಾಯದ ಎಲ್ಲ ಸದಸ್ಯರಿಗೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ನೀಡುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.
- ಸಮುದಾಯದಲ್ಲಿ ವಿವಿಧ ಕಾರಣಗಳಿಂದಾಗಿ ಪ್ರತ್ಯೇಕವಾದವರು, ಶೋಷಣೆಗೊಳಗಾದವರು ಮತ್ತು ನಿರಾಶ್ರಿತರಾದವರನ್ನು ಗುರುತಿಸಿ ಅವರಿಗೆ ಸ್ವಾವಲಂಬಿಗಳಾಗಿ ಬದುಕುವ ಮಾರ್ಗವನ್ನು ಒದಗಿಸಿ ಕೊಡುವಂತಹ ಯೋಜನೆಗಳನ್ನು ಆರಂಭಿಸಬಹುದು.
- ಮಕ್ಕಳು, ಮಹಿಳೆಯರು ಮತ್ತು ಸಾಮಾಜಿಕ ನೆಲೆಯಲ್ಲಿ ಅಂಚಿನಲ್ಲಿರುವ ಜನರ ಅಗತ್ಯಗಳನ್ನು ಗುರುತಿಸಿ ಅವುಗಳನ್ನು ಸಹಕಾರಿ ಸಂಘಗಳ ಮೂಲಕ ಹೇಗೆ ಒದಗಿಸಬಹುದೆಂಬ ಬಗ್ಗೆ ಯೋಚಿಸಿ ಕಾರ್ಯ ತಂತ್ರಗಳನ್ನು ರೂಪಿಸಬಹುದು
- ತಮ್ಮ ಪರಿಸರದಲ್ಲಿ ಯಾವುದೇ ಹಿಂಸಾಚಾರ, ಸಮುದಾಯಗಳ ನಡುವಿನ ಅಪನಂಬಿಕೆ. ಶೋಷಣೆ ಮುಂತಾದುವುಗಳು ನಡೆಯುವುದು ಗಮನಕ್ಕೆ ಬಂದಾಗ ಅದನ್ನು ಕಡಿಮೆ ಮಾಡುವ ಕುರಿತಂತೆ ವಿವಿಧ ಸಂಘಟನೆಗಳಿಗೆ ಸಹಕರಿಸಬಹುದು
- ದೇಶದ ಕಾನೂನಿನನ್ವಯ ಎಲ್ಲರಿಗೂ ಲಭ್ಯವಾಗುವ ಸಾಮಾನ್ಯ ಅವಕಾಶಗಳು ಮತ್ತು ಸವಲತ್ತುಗಳಿಂದ ಯಾರಾದರೂ ವಂಚಿತರಾಗುತ್ತಿದ್ದಲ್ಲಿ, ಅಂತಹ ಜನರಿಗೆ ಸಹಾಯಮಾಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು
- ಅಂತಾರಾಷ್ಟ್ರೀಯ ನೆಲೆಯಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಮಾನವ ಕಳ್ಳಸಾಗಣೆ, ಮುಗ್ಧ ಜನರನ್ನು ಮೋಸಗೊಳಿಸುವ ಯಾವುದೇ ಚಟುವಟಿಕೆಗಳು ಗಮನಕ್ಕೆ ಬಂದರೆ ಅವುಗಳನ್ನು ಸೂಕ್ತ ಮೂಲಗಳಿಗೆ ತಿಳಿಸಬಹುದು ಹಾಗೂ ಅಂತಹ ಚಟುವಟಿಕೆಗಳಿಂದಾಗಿ ಕಷ್ಟಕ್ಕೆ ಸಿಲುಕಿರುವವರಿಗೆ ತಾತ್ಕಾಲಿಕ ಆಶ್ರಯ ದೊರೆಯುವಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು, ಸಹಾಯ ನೀಡುವುದು ಮತ್ತು ಸಾಧ್ಯವಾದಾಗ ತಾವೇ ಅಂತಹ ಕಾರ್ಯಕ್ರಮಗಳನ್ನು ಆರಂಭಿಸುವ ಕೆಲಸ ಮಾಡಬಹುದು. (ಸಂಗ್ರಹ ಲೇಖನ)



# ಸಹಕಾರ ಮಾರ್ಗದರ್ಶಿ :
# ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

**ಸಾಲ ವಸೂಲಾತಿ ನ್ಯಾಯಮಂಡಲಿ [DRT: Debt Recovery Tribunal] :** 1995 ರಲ್ಲಿ ಕೇಂದ್ರ ಸರಕಾರವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿಯಾದ ಸಾಲಗಳ ವಸೂಲಾತಿ ಅಧಿನಿಯಮವನ್ನು ಜಾರಿಗೆ ತಂದಿತು. ಇದರಂತೆ ಬ್ಯಾಂಕುಗಳಿಗೆ ಬಾಕಿಯಾದ, ರೂ.10 ಲಕ್ಷಕ್ಕೆ ಮೇಲ್ಪಟ್ಟ ಸಾಲಗಳ ವಸೂಲಾತಿಗೆ ವಿಶೇಷ ನ್ಯಾಯಮಂಡಲಿಗಳನ್ನು ದೇಶದ ವಿವಿಧೆಡೆಗಳಲ್ಲಿ ಸ್ಥಾಪಿಸಲಾಗಿದೆ. ಇದು ಬ್ಯಾಂಕುಗಳ ಮತ್ತು ಹಣಕಾಸು ಸಂಸ್ಥೆಗಳ ಸಾಲಗಳನ್ನು ವಸೂಲಾತಿ ಮಾಡಿಕೊಡಲು ಮೀಸಲಾದ ನ್ಯಾಯಿಕ ವ್ಯವಸ್ಥೆ. ಸರಳವೂ, ಕಡಿಮೆ ಖರ್ಚಿನದೂ ಆದ ಈ ವ್ಯವಸ್ಥೆಯಿಂದ ಬ್ಯಾಂಕ್ ಸಾಲಗಳ ವಸೂಲಾತಿಯ ಜಟಿಲ ಸಮಸ್ಯೆಗೆ ಕೊಂಚಮಟ್ಟಿನ ಪರಿಹಾರ ದೊರೆತಿದೆ.

ದೇಶದ ವಿವಿಧ ರಾಜ್ಯಗಳಲ್ಲಿ 30 ಕ್ಕೂ ಹೆಚ್ಚು ನ್ಯಾಯಮಂಡಲಿಗಳಿರುವುದಲ್ಲದೆ 5 ಮೇಲ್ಮನವಿ ನ್ಯಾಯ ಮಂಡಲಿಗಳಿವೆ [DRATs: Debt Recovery Appallate Tribunals]. ಸಾಲ ವಸೂಲಾತಿ ಕುರಿತು ಬ್ಯಾಂಕುಗಳಿಂದ ಅರ್ಜಿಗಳನ್ನು ಸ್ವೀಕರಿಸಿ ತ್ವರಿತವಾಗಿ ಅವನ್ನು ವಿಚಾರಿಸಿ 6 ತಿಂಗಳೊಳಗೆ ವಸೂಲಾತಿ ಪ್ರಮಾಣಪತ್ರಗಳನ್ನು ನೀಡಬೇಕೆಂಬುದು ಕಾನೂನಿನ ಆಶಯವಾಗಿತ್ತಾದರೂ ಈ ವ್ಯವಸ್ಥೆಯಲ್ಲೂ ಸಾಕಷ್ಟು ವಿಳಂಬವಾಗುತ್ತಿದೆಯೆಂಬುದಂತೂ ನಿಜ. ಇಲ್ಲಿ ಸಾಕ್ಷಿಗಳು ಸತ್ಯಾಪನ ಪತ್ರ [Affidavit]ಗಳ ಮೂಲಕ ಹೇಳಿಕೆ ಸಲ್ಲಿಸಲು ಅವಕಾಶವಿದೆ. ಬ್ಯಾಂಕಿನ ಅಧಿಕಾರಿಗಳು ಸಾಕ್ಷಿ ನೀಡಲು ಪದೇ ಪದೇ ಖುದ್ದಾಗಿ ನ್ಯಾಯಮಂಡಲಿಗೆ ಬರಬೇಕಾದ ಅಗತ್ಯವಿಲ್ಲ. ನ್ಯಾಯಾಲಯ ವ್ಯವಸ್ಥೆಗಿಂತ ಇದು ಸರಳವಾಗಿದೆ. ಸಾಲದ ವಸೂಲಾತಿಯು ಈ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದು ಪ್ರತಿ ನ್ಯಾಯಮಂಡಲಿಯಲ್ಲೂ ಒಬ್ಬಿಬ್ಬರು ವಸೂಲಾತಿ ಅಧಿಕಾರಿಗಳಿದ್ದು ಬ್ಯಾಂಕಿನ ಬಾಕಿ ಹಣವನ್ನು ವಸೂಲು ಮಾಡಿಕೊಡಲು ಅಗತ್ಯವಾದ ಕಾನೂನಿಕ ಅಧಿಕಾರವನ್ನು ಅವರಿಗೆ ನೀಡಲಾಗಿದೆ. ವಾಣಿಜ್ಯ ಬ್ಯಾಂಕುಗಳ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ದೊಡ್ಡಮೊತ್ತದ ಸಾಲಗಳ ವಸೂಲಾತಿಗೆ ಈ ನ್ಯಾಯಮಂಡಲಿಗಳ ನೆರವು ಲಭಿಸುತ್ತಿದೆ.

**ಪ್ರತಿಭೂತೀಕರಣ ಅಧಿನಿಯಮ [Securitisation Act] :** ಪ್ರತಿಭೂತೀಕರಣ, ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿಗಳ ಜಾರಿ ಅಧಿನಿಯಮ–2002 [Securitisation And Reconstruction of Financial Assets and Enforcement of Security Interests Act -SARFAESI Act] ಎಂಬುದನ್ನು ಸಂಕ್ಷಿಪ್ತವಾಗಿ 'ಪ್ರತಿಭೂತೀಕರಣ ಅಧಿನಿಯಮ' ಎನ್ನಲಾಗುತ್ತದೆ. ಇದು ಬ್ಯಾಂಕ್ ಸಾಲಗಳ ವಸೂಲಾತಿಗೆ ನೆರವಾಗಲು ಕೇಂದ್ರ ಸರಕಾರವು ರೂಪಿಸಿರುವ ಇನ್ನೊಂದು ಕಾನೂನು. ಇದರಂತೆ ಸಾಲಗಾರರು ತಮಗೆ ಆಧಾರಪಡಿಸಿದ ಆಸ್ತಿಗಳನ್ನು ಬ್ಯಾಂಕುಗಳು–ನ್ಯಾಯಾಲಯ ಅಥವಾ ನ್ಯಾಯಮಂಡಲಿಯ ಮಧ್ಯಸ್ಥಿಕೆಯಿಲ್ಲದೆ–ನೇರವಾಗಿ ವಿಲೇ ಮಾಡಿ ತಮ್ಮ ಸಾಲಗಳನ್ನು ವಸೂಲು ಮಾಡಿಕೊಳ್ಳಬಹುದು.

ಸಾಲಗಾರರು ತಾವು ಪಡೆದ ಸಾಲಕ್ಕೆ ಬ್ಯಾಂಕಿಗೆ ಆಧಾರಪಡಿಸಿದ ಆಸ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಮಾತ್ರ ಬ್ಯಾಂಕಿಗೆ ಅಧಿಕಾರ; ಉಳಿದ ಆಸ್ತಿಗಳಿಗೆ ಅಲ್ಲ. ಕೃಷಿ ಸಂಬಂಧಿ ಆಸ್ತಿಗಳಿಗೆ (ಉದಾ: ಕೃಷಿ ಭೂಮಿ) ಈ ಅಧಿನಿಯಮ ಅನ್ವಯವಾಗುವುದಿಲ್ಲ. ಸಾಲದ ಬಾಕಿಯ ಮೊತ್ತ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರಬೇಕು. ಸಾಲದ ಮೊತ್ತದ ಶೇ.80 ರಷ್ಟು ಭಾಗ ಮರುಪಾವತಿಯಾಗಿದ್ದರೆ ಈ ಅಧಿನಿಯಮದಂತೆ ಕ್ರಮ ಕೈಗೊಳ್ಳುವ ಹಾಗಿಲ್ಲ. ಬ್ಯಾಂಕಿಗೆ ಅಡಮಾನವಾದ [Mortgaged] ಅಥವಾ ತೋರಾಧಾರವಾದ [Hypothecated] ಆಸ್ತಿಗಳ ಮೇಲೆ ಕ್ರಮ ಜರುಗಿಸಬಹುದು.

ಈ ಅಧಿನಿಯಮದಂತೆ ಬ್ಯಾಂಕುಗಳು 60 ದಿನಗಳ ಸೂಚನೆ ಕೊಟ್ಟು (ಸಾಲಗಾರ ಅಥವಾ ಜಾಮೀನುದಾರರು)ಸಾಲಕ್ಕೆ ಭದ್ರತೆಯಾಗಿ ತಮಗೆ ಆಧಾರಪಡಿಸಿದ ಆಸ್ತಿಗಳನ್ನು ವಶಪಡಿಸಿಕೊಳ್ಳಬಹುದು. ವಶಕ್ಕೆ ತೆಗೆದುಕೊಂಡ ಆಸ್ತಿಗಳನ್ನು ಹರಾಜು ಅಥವಾ ಇತರ ರೀತಿಯಲ್ಲಿ ವಿಲೇ ಮಾಡುವ ಮೊದಲು ಮತ್ತೆ 30 ದಿನಗಳ ಸೂಚನೆ ನೀಡಿರಬೇಕು.

ಬ್ಯಾಂಕು ಕೈಗೊಂಡ ಕ್ರಮದ ಬಗ್ಗೆ ಸಾಲಗಾರ/ಜಾಮೀನುದಾರರ ತಕರಾರು ಇದ್ದಲ್ಲಿ ಅವರು ಸಾಲ ವಸೂಲಾತಿ ನ್ಯಾಯಮಂಡಲಿಗೆ ಅರ್ಜಿ ಹಾಕಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಹಾಗೆ ತಕರಾರು ಸಲ್ಲಿಸಿದಾಗ ನ್ಯಾಯಮಂಡಲಿಯು ಬ್ಯಾಂಕಿನ ಕ್ರಮವು ಮೇಲೆ ಕಾಣಿಸಿದ ಅಧಿನಿಯಮಕ್ಕೆ ಅನುಗುಣವಾಗಿ ಇದೆಯೋ ಇಲ್ಲವೋ ಎಂಬುದನ್ನು ಗಮನಿಸಿ ತೀರ್ಪು ನೀಡುತ್ತದೆ. ಒಟ್ಟಾರೆ ಸವಾಲೆನಿಸುತ್ತಿರುವ ಬ್ಯಾಂಕುಗಳ ನಿಷ್ಕ್ರಿಯ ಆಸ್ತಿಗಳ (NPAs) ಸಮಸ್ಯೆಗೆ ಈ ಅಧಿನಿಯಮವೂ ಬೆಂಬಲ ನೀಡಿದೆ.

**ಮಾಹಿತಿ ಹಕ್ಕು ಅಧಿನಿಯಮ, 2005 [Right to Information Act, 2005] :** ಪ್ರಜಾಪ್ರಭುತ್ವದಲ್ಲಿ ದೇಶದ ಪ್ರಜೆಗಳಿಗೆ ಸಾರ್ವಜನಿಕ ಸಂಸ್ಥೆಗಳ ನಿಯಂತ್ರಣದಲ್ಲಿರುವ ಮಾಹಿತಿಯನ್ನು ಪಡೆಯಲು ಹಕ್ಕುಂಟು. ಮಾಹಿತಿ ಹಕ್ಕು ಅಧಿನಿಯಮವು ಈ ಹಕ್ಕನ್ನು ಪ್ರಜೆಗಳಿಗೆ ನೀಡಿದೆ. ಈ ಅಧಿನಿಯಮವು ಎಲ್ಲ ಸಾರ್ವಜನಿಕ ಪ್ರಾಧಿಕಾರಗಳು, ಸಂಸ್ಥೆಗಳು

ಅಥವಾ ಸಾರ್ವಜನಿಕ ವಲಯದ ಉದ್ಯಮಗಳು, ಬ್ಯಾಂಕುಗಳು ಮುಂತಾದವಕ್ಕೆ ಅನ್ವಯಿಸುತ್ತದೆ.

ಸರಕಾರದ ಅಥವಾ ಸಾರ್ವಜನಿಕ ಸಂಸ್ಥೆಗಳು ಹೇಗೆ ಕೆಲಸಮಾಡುತ್ತಿವೆ? ಅವುಗಳ ಕಾರ್ಯ ಮತ್ತು ನಿರ್ಧಾರಗಳಿಂದ ಸಾರ್ವಜನಿಕ ಹಿತವಾಗುತ್ತಿದೆಯೇ ಅಥವಾ ಅಲ್ಲಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ನಡೆಯುತ್ತಿದೆಯೇ? ಇವೇ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವ ಹಕ್ಕನ್ನು ಈ ಅಧಿನಿಯಮವು ದೇಶದ ಪ್ರಜೆಗಳಿಗೆ ನೀಡಿದೆ. ಬ್ಯಾಂಕುಗಳಿಗೂ ಈ ಅಧಿನಿಯಮ ಅನ್ವಯವಾಗುವುದರಿಂದ ಬ್ಯಾಂಕರರು ಇದನ್ನು ಕುರಿತು ತಿಳಿದಿರಬೇಕು.

1. **ಮಾಹಿತಿ** : ಯಾವುದೇ ರೂಪದಲ್ಲಿರುವ ಮಾಹಿತಿ ಅಥವಾ ದಾಖಲಾದ ದಸ್ತಾವೇಜು, ಇ-ಅಂಚೆ, ಪರಿಪತ್ರ [Circular], ಪತ್ರಿಕಾ ಪ್ರಕಟಣೆ [Press release], ಒಪ್ಪಂದ ಅಥವಾ ವಿದ್ಯುನ್ಮಾನ ದತ್ತಾಂಶ [Electronic Data] – ಮುಂತಾದವು ಇರಬಹುದು.
2. ಸಾಮಾನ್ಯ ಪ್ರಕರಣಗಳಲ್ಲಿ 30 ದಿನಗಳೊಳಗಾಗಿ ಮಾಹಿತಿಯನ್ನು ಪಡೆದುಕೊಳ್ಳಬಹುದು.
3. ಒಬ್ಬ ವ್ಯಕ್ತಿಯ ಜೀವದ ಅಥವಾ ಸ್ವಾತಂತ್ರ್ಯದ ಪ್ರಶ್ನೆಯಿದ್ದಾಗ ಮನವಿ ಮಾಡಿಕೊಂಡ 48 ಗಂಟೆಗಳೊಳಗಾಗಿ ಮಾಹಿತಿ ಪಡೆದುಕೊಳ್ಳಬಹುದು.
4. ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯೂ ಮಾಹಿತಿಯನ್ನು ಲಿಖಿತ/ವಿದ್ಯುನ್ಮಾನ ರೂಪದಲ್ಲಿ ನೀಡಬೇಕು.
5. ಕೆಲವು ನಿರ್ದಿಷ್ಟ ರೀತಿಯ ಮಾಹಿತಿ ನೀಡುವುದು ದೇಶದ ಹಿತದೃಷ್ಟಿಯಿಂದ ನಿಷಿದ್ಧ.
6. ರಾಜ್ಯ ಮಾಹಿತಿ ಅಧಿಕಾರಿ ಅಥವಾ ಕೇಂದ್ರ ಮಾಹಿತಿ ಅಧಿಕಾರಿಯ (ಮಾಹಿತಿ ನೀಡಿಕೆ ವಿಷಯ ಕುರಿತ) ನಿರ್ಧಾರಗಳ ವಿರುದ್ಧ ಉನ್ನತ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸುವ ಅವಕಾಶ.
7. ಮೇಲ್ಮನವಿ ಅಥವಾ ದೂರುಗಳನ್ನು ವಿಚಾರಿಸಲು ರಾಜ್ಯ / ಕೇಂದ್ರ ಸರಕಾರಗಳು ರಾಜ್ಯ ಮಾಹಿತಿ ಆಯೋಗ ಮತ್ತು ಕೇಂದ್ರ ಮಾಹಿತಿ ಆಯೋಗಗಳ [State/Central Information Commission] ಸ್ಥಾಪನೆ.
8. ಮಾಹಿತಿಯನ್ನು ನೀಡದಿರುವುದು, ಮಾಹಿತಿ ಕೋರಿ ಸಲ್ಲಿಸಿದ ಅರ್ಜಿ ಸ್ವೀಕರಿಸಲು ನಿರಾಕರಿಸುವುದು ಅಥವಾ ತಪ್ಪಾದ ಮಾಹಿತಿಯನ್ನು / ತಿರುಚಿದ ಮಾಹಿತಿಯನ್ನು ನೀಡುವುದು ದಂಡಾರ್ಹ. ಮಾಹಿತಿ ನೀಡಿಕೆಯಲ್ಲಿ ವಿಳಂಬವಾದರೆ ದಿನಕ್ಕೆ 250 ರೂ. ನಂತೆ ಗರಿಷ್ಠ 25000 ರೂ. ದಂಡ ಪಾವತಿಸಬೇಕಾಗುವುದು.

ಗ್ರಾಹಕರ ಖಾತೆಗಳನ್ನು ಕುರಿತು ನಿಷ್ಠೆ ಹಾಗೂ ಗೋಪ್ಯತೆಗಳನ್ನು [Fidelity and Secrecy] ಬ್ಯಾಂಕುಗಳು ಕಾಪಾಡಿಕೊಳ್ಳಬೇಕಾಗುತ್ತದೆ. ಬ್ಯಾಂಕಿಂಗ್ ಕಂಪನಿಗಳ ಅಧಿನಿಯಮದ 13ನೇ ವಿಧಿಯಂತೆ ಗ್ರಾಹಕರ ವ್ಯವಹಾರಗಳನ್ನು ಕುರಿತು ಅವರ ಅನುಮತಿಯಿಲ್ಲದೆ ಯಾರಿಗೂ ಬಹಿರಂಗ ಪಡಿಸಬಾರದು. ಆದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ಗ್ರಾಹಕರ ವ್ಯವಹಾರ ಕುರಿತ ಮಾಹಿತಿಯನ್ನು ಬಹಿರಂಗ ಪಡಿಸುವುದಕ್ಕೆ ಅನುಮತಿಯಿದೆ. ಹೀಗಾಗಿ ಮಾಹಿತಿ ಹಕ್ಕು ಅಧಿನಿಯಮವು ಬ್ಯಾಂಕುಗಳಿಗೂ ಅನ್ವಯವಾದರೂ ಅಧಿನಿಯಮದ ವಿಧಿ 8ರ (1) d, e ಮತ್ತು j ಉಪವಿಧಿಗಳಲ್ಲಿ ಬ್ಯಾಂಕುಗಳಿಗೆ ಕೆಲವು ವಿನಾಯಿತಿಗಳನ್ನು ಸೂಚಿಸಲಾಗಿದೆ. ಗ್ರಾಹಕರ ಸ್ಪರ್ಧಾತ್ಮಕತೆಗೆ ಧಕ್ಕೆ ತರುವ ವಾಣಿಜ್ಯ ಗೋಪ್ಯತೆ, ವ್ಯವಹಾರ ರಹಸ್ಯಗಳು ಅಥವಾ ಬೌದ್ಧಿಕ ಹಕ್ಕುಗಳು – ಈ ಕುರಿತ ಮಾಹಿತಿಯನ್ನು ಬಹಿರಂಗಗೊಳಿಸಬೇಕಾಗಿಲ್ಲ. ನ್ಯಾಸಧಾರಿಯಾಗಿ [Trustee] ಬ್ಯಾಂಕರನಿಗೆ ಒದಗಿರುವ ಮಾಹಿತಿಯನ್ನು ಬಹಿರಂಗ ಪಡಿಸಬೇಕಾಗಿಲ್ಲ. ಯಾವುದೇ ಸಾರ್ವಜನಿಕ ಚಟುವಟಿಕೆಗೆ ಸಂಬಂಧ ಪಡದ ಅಥವಾ ಗ್ರಾಹಕರ ಖಾಸಗೀ ಬದುಕಿಗೆ ಧಕ್ಕೆ ತರುವಂಥ ವೈಯಕ್ತಿಕ ಮಾಹಿತಿಯನ್ನು ನೀಡಬೇಕಾಗಿಲ್ಲ.

- ತೊಡೆದು ಹಾಕಲಾದ ಕೆಟ್ಟ ಸಾಲಗಳು [Bad debts Written off]
- ನಿಷ್ಕ್ರಿಯ ಆಸ್ತಿಗಳ ಸ್ಥಿತಿ / ಅಂಕಿ ಅಂಶಗಳು
- ಸುಸ್ತಿದಾರರ ಖಾತೆಗಳಲ್ಲಿ ರಾಜಿ ಮೂಲಕ ಮಾಡಿಕೊಂಡ ಸಾಲ ತೀರುವೆಗಳಲ್ಲಿ ಸಿಬ್ಬಂದಿಯ ಉತ್ತರದಾಯಿತ್ವ [accountability]
- ನಿರ್ದಿಷ್ಟ ಕೈಗಾರಿಕಾ ಸಮೂಹಗಳಿಗೆ ಅತಿಯಾದ ಸಾಲ ನೀಡಿಕೆ
- ಬ್ಯಾಂಕಿನ ಕಚೇರಿಗಳ ಆವರಣಗಳನ್ನು ಬಾಡಿಗೆಗೆ ಪಡೆಯುವ ಬಗ್ಗೆ
- ವಸೂಲಾತಿ ಸ್ಥಿತಿ; ಕೆಲವು ಸಾಲ ಖಾತೆಗಳಲ್ಲಿ ವಸೂಲಾತಿಗೆ ಕಾನೂನು ಕ್ರಮ ಕೈಗೊಳ್ಳದೆ ಇರುವುದು
- ವ್ಯರ್ಥವಾದ ಖರ್ಚುಗಳು
- ಬ್ಯಾಂಕ್ ವಂಚನೆಗಳು ಹಾಗೂ ವಂಚನೆ ಪ್ರಕರಣಗಳಲ್ಲಿ ಬ್ಯಾಂಕಿನ ಉದ್ಯೋಗಿಗಳ ಕೈವಾಡ

– ಇಂಥ ವಿಷಯಗಳನ್ನು ಕುರಿತ ಮಾಹಿತಿ ಕೋರಿ ಮನವಿಗಳು ಬಂದರೆ ಬ್ಯಾಂಕುಗಳು ಅರ್ಜಿದಾರರಿಗೆ ಮಾಹಿತಿಯನ್ನು ನೀಡಲೇ ಬೇಕು.

ಎಲ್ಲ ಬ್ಯಾಂಕುಗಳ ಕೇಂದ್ರ ಕಚೇರಿ ಮತ್ತು ಆಡಳಿತ ಕಚೇರಿಗಳಲ್ಲಿ ಮಾಹಿತಿ ಅಧಿಕಾರಿಗಳು ನೇಮಕವಾಗಿರಬೇಕು ಹಾಗೂ ಅರ್ಜಿದಾರರು ಕೇಳಿರುವ ನಮೂನೆಯಲ್ಲಿಯೇ (ಸಾಧ್ಯವಾದಷ್ಟು ಮಟ್ಟಿಗೆ) ಮಾಹಿತಿ ನೀಡಬೇಕೆಂಬುದು ಅಧಿನಿಯಮದ ನಿರೀಕ್ಷೆ. ಮಾಹಿತಿಯನ್ನು ದಸ್ತಾವೇಜುಗಳ ರೂಪದಲ್ಲಿ, ಮುದ್ರಿತ ತಃಖ್ತೆಗಳ ರೂಪದಲ್ಲಿ, ವಿದ್ಯುನ್ಮಾನ ರೂಪದಲ್ಲಿ, ಅಡಕ ಮುದ್ರಿಕೆ ಮುಂತಾದವುಗಳ ಮೂಲಕ ಒದಗಿಸಲು ಅವಕಾಶವಿದೆ. ಮಾಹಿತಿ ಶೀಘ್ರ ಸಂಗ್ರಹಣೆ ಮತ್ತು ನೀಡಿಕೆಗೆ ಅನುಕೂಲವಾಗುವಂತೆ ಎಲ್ಲ ಬ್ಯಾಂಕುಗಳೂ ಆದಷ್ಟು ಬೇಗ ಕೋರ್ ಬ್ಯಾಂಕಿಂಗ್ ಪರಿಹಾರ [CBS] ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು ಬ್ಯಾಂಕುಗಳಿಗೆ ಸೂಚಿಸಿದ್ದೂ ಆಗಿದೆ.

(ಮುಂದುವರೆಯುವುದು...)

## ಸ್ಪರ್ಧಾತ್ಮಕ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

1. ಯುನೈಟೆಡ್ ಅರಬ್ ಎಮಿರೇಟ್ಸ್ (UAE) ನಲ್ಲಿ ಎಷ್ಟು ಪ್ರಾಂತ (ಎಮಿರೇಟ್)ಗಳಿವೆ?

ಎ) ಹತ್ತು

ಬಿ) ಐದು

ಸಿ) ಅದು ಒಂದೇ ಪ್ರಾಂತ

ಡಿ) ಏಳು

2. ಪ್ರಸಿದ್ಧ ಪಶುಪತಿನಾಥ ಮಂದಿರ ಈ ಮುಂದಿನ ಯಾವ ದೇಶದಲ್ಲಿದೆ?

ಎ) ಭೂತಾನ

ಬಿ) ನೇಪಾಳ

ಸಿ) ಭಾರತ

ಡಿ) ಶ್ರೀಲಂಕಾ

3. ಇವುಗಳಲ್ಲಿ ಪ್ರಖ್ಯಾತ ಲಿಫ್ಟ್ ಕಂಪನಿಯೊಂದರ ಸ್ಥಾಪಕರಾಗಿದ್ದವರು ಯಾರು?

ಎ) ಎಲಿಷಾ ಗ್ರೇವ್ಸ್ ಓಟಿಸ್

ಬಿ) ಜೋಸೆಫ್ ಮಿಲಿಟಸ್

ಸಿ) ಹರಗೋವಿಂದ ಖುರಾನ

ಡಿ) ಎಲ್ವಿಸ್ ಬರ್ಗರ್

4. ಈ ಮುಂದಿನವುಗಳಲ್ಲಿ ಜಗತ್ತಿನ ಅತ್ಯಂತ ಎತ್ತರದ ಕಟ್ಟಡ ಯಾವುದು?

ಎ) ಟ್ವಿನ್ ಟವರ್ಸ್, ಕೌಲಾಲಂಪುರ

ಬಿ) ಶಾಂಘಾಯ್ ಟವರ್ (ಚೀನಾ)

ಸಿ) ಬುರ್ಜ್ ಖಲೀಫಾ (ಯು.ಎ.ಇ.)

ಡಿ) ವರ್ಲ್ಡ್ ಟ್ರೇಡ್ ಸೆಂಟರ್ ಟವರ್ (ಯು.ಎಸ್.ಎ.)

5. ಹೆಸರು ಮತ್ತು ಸಂಶೋಧನೆಯ ಕ್ಷೇತ್ರಗಳ ಈ ಜೋಡಿಗಳಲ್ಲಿ ಯಾವುದು ಸರಿಯಾಗಿದೆ?

ಎ) ರಾಬರ್ಟ್ ಬಾಯ್ಲ್ – ಸೌರ ಜ್ವಾಲೆ

ಬಿ) ಥಾಮಸ್ ಆಲ್ವ ಎಡಿಸನ್ – ಶಬ್ದ ಸಿದ್ಧಾಂತ

ಸಿ) ಗ್ರಹಾಂ ಬೆಲ್ – ವಿದ್ಯುದ್ದೀಪ

ಡಿ) ಆಲ್ಬರ್ಟ್ ಐನ್ಸ್ಟೀನ್–ಸಾಪೇಕ್ಷ ಸಿದ್ಧಾಂತ

6. ಇವುಗಳಲ್ಲಿ ಯಾವ ರಾಜ್ಯ/ಪ್ರದೇಶವು ಈಶಾನ್ಯಭಾರತದಲ್ಲಿ ಇಲ್ಲ?

ಎ) ಹಿಮಾಚಲ ಪ್ರದೇಶ

ಬಿ) ಜಾರ್ಖಂಡ್

ಸಿ) ತ್ರಿಪುರ

ಡಿ) ಮಣಿಪುರ

7. ಜಗತ್ತಿನ ಅತ್ಯಂತ ಎತ್ತರದಲ್ಲಿರುವ ಶಿವನ ದೇವಾಲಯವೆಂದು ಪ್ರಸಿದ್ಧವಾಗಿರುವ ಸ್ಥಳವಿದು:

ಎ) ತುಂಗನಾಥ

ಬಿ) ಬದರೀನಾಥ

ಸಿ) ಪಾರ್ಶ್ವನಾಥ

ಡಿ) ಕೇದಾರನಾಥ

8. ಇದು ವಿಶ್ವದಲ್ಲಿ ಅತ್ಯಂತ ಹೆಚ್ಚಿನ ಜನಸಂಖ್ಯೆಯುಳ್ಳ ದೇಶಗಳಲ್ಲಿ ಎರಡನೆಯದು

ಎ) ಯುನೈಟೆಡ್ ಸ್ಟೇಟ್ಸ್

ಬಿ) ಚೀನಾ

ಸಿ) ಭಾರತ

ಡಿ) ರಷ್ಯಾ

9. ಉತ್ತರ ರಾಮಚರಿತೆಯ ಕರ್ತೃ : ______________ .

ಎ) ಕಾಳಿದಾಸ

ಬಿ) ಭರ್ತೃಹರಿ

ಸಿ) ಭಾರವಿ

ಡಿ) ಭವಭೂತಿ

10. ಇವರಲ್ಲಿ ಪ್ರಸಿದ್ಧ ಸಂಸ್ಕೃತ ನಾಟಕಕಾರ ಯಾರು?

ಎ) ಭರತಮುನಿ

ಬಿ) ಭಾಸ

ಸಿ) ಕಲ್ಹಣ

ಡಿ) ದಂಡಿ